ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಜೂನ್ 2020
ಸಂಪುಟ 16, ಸಂಚಿಕೆ 04
ಸಂಚಿಕೆ ಬೆಲೆ ರೂ. 1/-

324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com

## ಬಂಟರ ಸಂಘದ ಕಾರ್ಯಸಾಧನೆಗಳ ಇಣುಕು ನೋಟ



**Since 1991**

# SURABHI Chits Ltd.

(Govt. Licenced Chit Company)

## Come and Join our Popular Chit Groups

| Chit Value | Months | Monthly Subscription |
|---|---|---|
| Rs. 1,50,000/- | 30 | Rs. 5,000/- |
| Rs. 2,00,000/- | 40 | Rs. 5,000/- |
| Rs. 3,00,000/- | 40 | Rs. 7,500/- |
| Rs. 3,00,000/- | 30 | Rs. 10,000/- |
| Rs. 5,00,000/- | 50 | Rs. 10,000/- |
| Rs. 5,00,000/- | 40 | Rs. 12,500/- |
| Rs. 6,00,000/- | 30 | Rs. 20,000/- |
| Rs. 10,00,000/- | 40 | Rs. 25,000/- |
| Rs. 10,00,000/- | 50 | Rs. 20,000/- |
| Rs. 7,50,000/- | 30 | Rs. 25,000/- |
| Rs. 15,00,000/- | 30 | Rs. 50,000/- |
| Rs. 25,00,000/- | 50 | Rs. 50,000/- |
| Rs. 30,00,000/- | 30 | Rs. 1,00,000/- |
| Rs. 50,00,000/- | 50 | Rs. 1,00,000/- |
| Rs.1,00,00,000/- | 50 | Rs. 2,00,000/- |
| Rs. 1,00,00,000/- | 40 | Rs. 2,50,000/- |
| Rs. 1,50,00,000/- | 30 | Rs. 5,00,000/- |

**FOR ENQUIRY PLEASE CONTACT**



**Harish .B**
Associate Vice-President
**Cell : 96119 74111**

**Malleswaram :** No. 40, 1st Floor, "Sai Spandana" Sirur Park Road, Malleswaram, Bangalore - 560 003.
Phone : 080 - 4141 1683 / 684 / 685 E-mail : malleswaramsurabhi@gmail.com Website : www.surabhichits.in
**CORPORATE OFFICE :** JAYANAGAR, BANGALORE - 560 011.

**OUR BRANCHES**

SHIVANANDA CIRCLE * BASAVESHWARA NAGAR * RAJARAJESHWARI NAGAR * JAYANAGAR * VIDYARANYAPURA * BASAVANAGUDI * R T NAGARA * K R ROAD * J P NAGAR

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 16** **JUNE 2020** **ISSUE 04**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕೀಯ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ಮಹಿಳಾ ವಿಭಾಗ – ವರದಿ | 5 |
| 5. | ವಿವಾಹ ವೇದಿಕೆ 2018–19, 2019–20 | 8 |
| 6. | ಸಮಾಜ ಸೇವಾ ಸಮಿತಿ ಮತ್ತು ಸೇವಾದಳ | 12 |
| 7. | ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ | 14 |
| 8. | ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ | 16 |
| 9. | ಕ್ರೀಡಾ ಸಮಿತಿ – ವರದಿ | 18 |
| 10. | ಯುವ ವಿಭಾಗ – ವರದಿ | 21 |
| 11. | HR ಮತ್ತು ಉದ್ಯೋಗ ಮಾಹಿತಿ ವಿಭಾಗ | 25 |
| 12. | ಸಾಂಸ್ಕೃತಿಕ ಸಮಿತಿ – ವರದಿ | 27 |
| 13. | ವೈದ್ಯಕೀಯ ವಿಭಾಗ – ವರದಿ | 33 |
| 14. | BSRNSV - II Project | 34 |
| 15. | Purchase Committee / ಸಂಕೀರ್ಣ ನಿರ್ವಹಣಾ ಸಮಿತಿ | 37 |
| 16. | ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ – ವರದಿ | 38 |
| 17. | ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿ | 41 |

**ಮುಖಪುಟ**

**ಬಂಟರ ಸಂಘದ ಕಾರ್ಯ ಸಾಧನೆಗಳ ಇಣುಕು ನೋಟ**

# ಸಂಪಾದಕೀಯ



ಕೊರೊನಾ ವೈರಸ್ ಅಥವಾ ಕೋವಿಡ್–19, ಇಡೀ ಜಗತ್ತನ್ನೇ ತಲ್ಲಣಗೊಳಿಸಿದ ಮಾರಕ ಸಾಂಕ್ರಮಿಕ. ಈ ವೈರಲ್ ಹರಡುವಿಕೆಯು ತುಂಬಾ ತ್ವರಿತವಾಗಿದ್ದರಿಂದ ಇದನ್ನು ನಿಯಂತ್ರಿಸುವುದು ಕಷ್ಟವಾಗಿದೆ. ಚೀನಾದಲ್ಲಿ ಇದರ ಮೂಲದೊಂದಿಗೆ, ವೈರಲ್ ತ್ವರಿತವಾಗಿ ಪ್ರಪಂಚದಾದ್ಯಂತ ಹರಡಿತು. ಬಹುತೇಕ ಯಾವುದೇ ರಾಷ್ಟ್ರಗಳನ್ನು ಉಳಿಸಲಾಗಿಲ್ಲ. ಸ್ಪೇನ್, ಇಟಲಿ, ಅಮೇರಿಕಾ ಮುಂತಾದ ದೇಶಗಳಲ್ಲಿ ಅಪಾರ ಸಂಖ್ಯೆಯ ಸಾವು ಉಂಟಾಗಿದೆ. ಈ ದೇಶಗಳು ವರ್ಷದ ಆರಂಭದಲ್ಲಿ ವೈರಸ್‌ನೊಂದಿಗೆ ಹೋರಾಡುತ್ತಿರುವಾಗ ಸಾಮಾಜಿಕ ಅಂತರದ ಅಗತ್ಯತೆಯ ಅರಿವಾಯಿತು. ಈ ವೈರಸ್‌ನ ಪ್ರತಿಕ್ರಿಯೆಗಳು ದೇಶದಿಂದ ದೇಶಕ್ಕೆ ಬಹಳ ಭಿನ್ನವಾಗಿದೆ, ಆದರೆ ಸಂಪರ್ಕತಡೆ ಮತ್ತು ಲಾಕ್‌ಡೌನ್‌ಗಳು ಸರ್ವತ್ರವಾಗಿವೆ.

ಭಾರತದಲ್ಲಿ ಮಾರ್ಚ್ 23ರಂದು ಪ್ರಧಾನಿ ನರೇಂದ್ರ ಮೋದಿಯವರ ಆದೇಶದಂತೆ ಇಡೀ ದೇಶಕ್ಕೆ ಬೀಗ ಜಡಿದು, 1.3 ಶತಕೋಟಿ ಜನರನ್ನು 21 ದಿನಗಳ ಕಾಲ ತಮ್ಮ ಮನೆಗಳಿಗೇ ಸೀಮಿತಗೊಳಿಸಲಾಯಿತು. ಕರ್ಫ್ಯೂ ವಿಧಿಸಲಾಯಿತು. ಹೆಚ್ಚಿನ ವ್ಯವಹಾರಗಳನ್ನು ಮುಚ್ಚಲಾಯಿತು. ಇದರ ಪರಿಣಾಮವಾಗಿ ಜನರು ದಿಗ್ಭ್ರಮೆಗೊಂಡರಲ್ಲದೇ ಹಲವರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳಬೇಕಾಯಿತು. ಲಾಕ್‌ಡೌನ್ ಕ್ರಮಗಳು ಭಾರಿ ಆಂತರಿಕ ವಲಸೆಯನ್ನು ಕಂಡವು. ಜನರು ತಮ್ಮ ಹಳ್ಳಿಗಳಿಗೆ, ಊರುಗಳಿಗೆ ಮರಳಲು ನಗರಗಳನ್ನು ಬಿಟ್ಟು ಓಡಿದರು. ದಿನಕೂಲಿ ಕಾರ್ಮಿಕರು ಮುಂದೇನು ಎಂಬ ಯೋಚನೆಯಲ್ಲಿದ್ದರೆ, ಸಾಧ್ಯವಿರುವವರು ಮನೆಯಿಂದ ಕೆಲಸ ಮಾಡಲು ಪ್ರಾರಂಭಿಸಿದರು. ವ್ಯಾಪಾರಗಳು ಕಿರಾಣಿ ಅಂಗಡಿಗಳು ಮತ್ತು ಬ್ಯಾಂಕುಗಳಂತಹ ಅಗತ್ಯಗಳಿಗೆ ಮಾತ್ರ ಸೀಮಿತವಾಗಿ, ದಿನಸಿಗಾಗಿ ಜನರು ಹೆಜ್ಜೆ ಹಾಕುವುದನ್ನು ಹೊರತುಪಡಿಸಿದರೆ, ಮಾಲ್‌ಗಳು, ಪಾರ್ಲರ್‌ಗಳು, ಸಲೂನ್‌ಗಳು, ಹೋಟೇಲ್‌ಗಳು, ಚಿತ್ರಮಂದಿರಗಳು, ಜಿಮ್‌ಗಳು ಎಲ್ಲವನ್ನೂ ಮುಚ್ಚಲಾಯಿತು. ಜನರು ಸಾಧ್ಯವಾದಷ್ಟು ಮಟ್ಟಿಗೆ ಏನಾದರೂ ಕೆಲಸದಲ್ಲಿ ತೊಡಗಿಸಿಕೊಂಡರೆ ಅನೇಕರು ಮನೆಯಲ್ಲಿಯೇ ಟಿ.ವಿ, ಮೊಬೈಲ್, ಕಂಪ್ಯೂಟರ್ ಗೇಮ್‌ಗಳಿಗೆ ಬೆಸೆದುಕೊಂಡರು. ಕೆಲವೊಂದು ಶಾಲಾ ಕಾಲೇಜುಗಳು ಕಂಪೆನಿಗಳು ಜೂಮ್, ಸ್ಕೈಪ್‌ಗಳ ಉಪಯೋಗದೊಂದಿಗೆ ಮೀಟಿಂಗ್‌ಗಳನ್ನು ಕುಳಿತಲ್ಲೇ ಮಾಡುವಂತಾಯಿತು. ನಮ್ಮ ಬಂಟರ ಸಂಘವೂ ಇದಕ್ಕೆ ಹೊರತಾಗಿಲ್ಲ.


**ಕೋವಿಡ್–19ನಿಂದ ಹೊರಬರಲು ನಮ್ಮ ಜವಾಬ್ದಾರಿ**

ದೇಶ ನಿಧಾನವಾಗಿ ಪುನಃ ತೆರೆಯಲು ಪ್ರಾರಂಭಿಸಿದಾಗ, ಕೋವಿಡ್–19 ಸಾಂಕ್ರಮಿಕ ರೋಗ ಇನ್ನೂ ಮುಗಿದಿಲ್ಲ ಎಂಬುವುದನ್ನು ನಾವೆಲ್ಲರೂ ನೆನಪಿನಲ್ಲಿಡಬೇಕು. ಜನರು ತಮ್ಮ ಸಂಪಾದನೆಯನ್ನು ಪುನಃ ಪ್ರಾರಂಭಿಸಬಹುದೆಂಬ ಆಶಯದಿಂದ ಸರ್ಕಾರವು ಕೆಲವು ನಿರ್ಬಂಧಗಳನ್ನು ಸಡಿಲಗೊಳಿಸಿರಬಹುದು. ಹಾಗೆಯೇ ಜನರು ತಮ್ಮ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಂಪಾದನೆ ಪ್ರಾರಂಭಿಸಬಹುದು. ಆದರೆ ಅಲ್ಲಲ್ಲಿ ಕೈಗಳ ಸ್ಪರ್ಶದಿಂದ, ಗುಂಪು ಗುಂಪಾಗಿ ಸೇರುವುದರಿಂದ ಅಪಾಯವು ಕಟ್ಟಿಟ್ಟ ಬುತ್ತಿ. ಕಿರಿಯ ವಯಸ್ಸಿನವರಿಗೆ ದೇಹದಲ್ಲಿ ರೋಗನಿರೋಧಕ ಶಕ್ತಿ ಇರಬಹುದು ಆದರೆ ರೋಗ ಲಕ್ಷಣಗಳು ಕಾಣಿಸಿಕೊಳ್ಳಲು ವಾರಗಳೇ ಬೇಕಾಗುತ್ತವೆ. ರೋಗ ಲಕ್ಷಣವಿಲ್ಲದ ವ್ಯಕ್ತಿ ವೈರಸ್ ಹೊತ್ತಿರಬಹುದೆಂಬುದು ತಿಳಿಯುವುದಿಲ್ಲ. ಇವರಿಂದ ಇತರರಿಗೆ ಹರಡಬಹುದು. ಮಕ್ಕಳು ಮತ್ತು ವೃದ್ಧರಿಗೆ ಬೇಗನೆ ಹರಡಬಹುದು.

ಆದ್ದರಿಂದ ನಾವೆಲ್ಲರೂ ನಮ್ಮ ಪ್ರವಾಸಗಳು, ಅನಗತ್ಯ ಓಡಾಟಗಳನ್ನು ಕಡಿತಗೊಳಿಸಿ, ಮಾಸ್ಕ್ ಧರಿಸಿ, ಪರಸ್ಪರ ಅಂತರವನ್ನು ಕಾಯ್ದುಕೊಂಡು, ಸ್ಯಾನಿಟೈಸರ್ ಬಳಸುವುದು, ಸಾಬೂನು ಬಳಸಿ ಆಗಾಗ ಕೈ ತೊಳೆಯುವ ಅಭ್ಯಾಸ ಮಾಡಿಕೊಳ್ಳಬೇಕು. ಪೊಲೀಸ್, ವೈದ್ಯರು ಮತ್ತು ಇತರ ಆರೋಗ್ಯ ಸಿಬ್ಬಂದಿಗಳೊಡನೆ ಸಂಯಮದಿಂದ ಇದ್ದು, ಈ ಮಾರಕ ವೈರಸ್ ನಮ್ಮ ದೇಶವನ್ನು ಸ್ವಾದೀನ ಪಡಿಸಿಕೊಳ್ಳದಂತೆ ತಡೆದು, ಕೋವಿಡ್–19 ಅನ್ನು ಸೋಲಿಸಬೇಕು.

**ಎಂ. ಮುರಲೀಧರ ಹೆಗ್ಡೆ**
hegdemm@gmail.com

# ಅಧ್ಯಕ್ಷರ ಮಾತು



ಮಾನ್ಯ ಸದಸ್ಯರೇ,

ಕಳೆದ 3–4 ತಿಂಗಳುಗಳಿಂದ ವಿಶ್ವವ್ಯಾಪಿ ಹರಡಿದ ಕೋವಿಡ್ 19 ವೈರಸ್ ಹಂತ ಹಂತವಾಗಿ ವ್ಯಾಪಿಸಿ ಬೃಹದಾಕಾರದ ಸಾಂಕ್ರಾಮಿಕವಾಗಿ ನಮ್ಮ ಮುಂದೆ ನಿಂತಿದೆ. ಮುನ್ನೆಚ್ಚರಿಕಾ ಕ್ರಮವಾಗಿ ಸರಕಾರ ಆದೇಶಿದ ಲಾಕ್‌ಡೌನ್ ಪರಿಣಾಮವಾಗಿ ವ್ಯಾಪಾರ ವಹಿವಾಟು, ಆರ್ಥಿಕ ಚಟುವಟಿಕೆಗಳು ಸಂಪೂರ್ಣವಾಗಿ ಸ್ಥಗಿತಗೊಂಡು ಹೆಚ್ಚಿನ ಉದ್ಯಮಗಳು ಆರ್ಥಿಕ ಹೊಡೆತ ಅನುಭವಿಸುತ್ತಿವೆ. ಸಣ್ಣ–ಪುಟ್ಟ ವ್ಯಾಪಾರಿಗಳಿಂದ ಹಿಡಿದು ದೊಡ್ಡ ದೊಡ್ಡ ಕಂಪೆನಿ, ಹೋಟೇಲ್, ರೆಸ್ಟೋರೆಂಟ್ ಮೊದಲಾದ ವ್ಯವಹಾರಗಳಿಗೆ ಭಾರೀ ನಷ್ಟವುಂಟಾಗಿದೆ. ಹೆಚ್ಚಿನವರು ಉದ್ಯೋಗ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಅಕ್ಷರಶ: ವಿಶ್ವದ ಇಡೀ ಆರ್ಥಿಕ ವ್ಯವಸ್ಥೆ ಅಲ್ಲೋಲ–ಕಲ್ಲೋಲವಾಗಿದೆ.

ಇಂದಿನ ಈ ಪರಿಸ್ಥಿತಿ 1974ರ ಅವಧಿಯ ಭೂಮಸೂದೆ ಕಾಯಿದೆಯಿಂದ ಉಂಟಾದ ಆರ್ಥಿಕ ಬಿಕ್ಕಟ್ಟನ್ನು ನೆನಪಿಸುವಂತಿದೆ. ಅಂದು ಕೃಷಿಯನ್ನೇ ನಂಬಿಕೊಂಡಿದ್ದ, ಸಾವಿರಾರು ಬಂಟ ಕುಟುಂಬಗಳು ದಿಕ್ಕೆಟ್ಟು ಹೋದವು. ಚಿಕ್ಕ, ದೊಡ್ಡ ಭೂಮಾಲೀಕರುಗಳೆಲ್ಲಾ ನೆಲೆ ಕಳೆದುಕೊಂಡು ತುಂಬಾ ಸಂಕಷ್ಟಕ್ಕೆ ಒಳಗಾದರು. ಈ ಸಂದರ್ಭದಲ್ಲಿ ಹೆಚ್ಚಿನ ಬಂಟ ಯುವಕ–ಯುವತಿಯರಿಗೆ ಮುಲ್ಕಿ ಸುಂದರ ರಾಂ ಶೆಟ್ಟಿಯವರು ವಿಜಯಾ ಬ್ಯಾಂಕ್‌ನಲ್ಲಿ ಕೆಲಸ ನೀಡಿದರು, ಹಾಗಾಗಿ ಸಾವಿರಾರು ಬಂಟ ಕುಟುಂಬಗಳು ಸುಭದ್ರ ಬದುಕು ಕಟ್ಟಿಕೊಳ್ಳುವಂತಾಯಿತು. ಹಾಗೆಯೇ ಸಾವಿರಾರು ಬಂಟ ಯುವಕರು ಜೀವನ ಹುಡುಕಿಕೊಂಡು ಮುಂಬಯಿ, ಪೂನಾ, ಬೆಂಗಳೂರು, ಹುಬ್ಬಳ್ಳಿ–ಬೆಳಗಾಂ ಮೊದಲಾದ ನಗರಗಳಿಗೆ ವಲಸೆ ಹೋದರು. ಕಾರ್ಖಾನೆ, ಕಛೇರಿ, ಹೋಟೇಲ್ ಮೊದಲಾದ ಕಡೆ ಕೆಲಸ ಗಿಟ್ಟಿಸಿಕೊಂಡು, ಕೆಲಸದ ಜೊತೆ–ಜೊತೆಗೆ ಕೆಲವರು ತಮ್ಮ ವಿದ್ಯಾಭ್ಯಾಸವನ್ನೂ ಮುಂದುವರಿಸಿದರು. ಹಂತ–ಹಂತವಾಗಿ ತಮ್ಮ ಉದ್ಯಮ/ವೃತ್ತಿಯಲ್ಲಿ ಪ್ರಗತಿ ಸಾಧಿಸುವುದರೊಂದಿಗೆ ತಮ್ಮ ಸಂಬಂಧಿಕರು, ಹುಟ್ಟೂರಿನ ಗೆಳೆಯರು, ಪರಿಚಿತರನ್ನೂ ತಮ್ಮಲ್ಲಿಗೆ ಕರೆಸಿಕೊಂಡು ಜೀವನೋಪಾಯ ಕಂಡುಕೊಳ್ಳುವಲ್ಲಿ ಸಹಕರಿಸಿದರು.

ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಮಾತಿನ ಹಾಗೆ, ಬಂಟರು ಕೈಯಾಡಿಸದ ಕ್ಷೇತ್ರವಿಲ್ಲ. ಶೈಕ್ಷಣಿಕ, ವೈದ್ಯಕೀಯ, ಉದ್ಯಮ, ಕೈಗಾರಿಕೆ, ತಂತ್ರಜ್ಞಾನ ಮೊದಲಾದ ಕ್ಷೇತ್ರಗಳಲ್ಲಿ ಉನ್ನತ ಸ್ಥಾನಕ್ಕೇರುವುದರೊಂದಿಗೆ, ಲಕ್ಷಾಂತರ ಜನರಿಗೆ ಅನ್ನದಾತರಾಗಿ ಸಮಾಜಕ್ಕೆ ಮಾದರಿಯಾದವರು ಬಂಟರು. ಬಂಟರದ್ದು ದಾನ–ಧರ್ಮದಲ್ಲಿ ಎತ್ತಿದ ಕೈ. ತಮ್ಮ ಅಭಿವೃದ್ಧಿಯನ್ನಷ್ಟೇ ಬಯಸದೇ, ಯಶಸ್ಸಿನ ಪ್ರತಿಫಲವನ್ನು ಸಮಾಜಕ್ಕೆ ಹಾಗೂ ತನ್ನ ಜನಾಂಗಕ್ಕೂ ಕೊಡುಗೆಯನ್ನಾಗಿ ನೀಡಿರುತ್ತಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ತಮ್ಮ ಹುಟ್ಟೂರಿನ ಮಕ್ಕಳ ವಿದ್ಯಾಭ್ಯಾಸ, ಹೆಣ್ಣುಮಕ್ಕಳ ಮದುವೆಗೆ ಧನಸಹಾಯ, ಶಾಲೆಗಳ ಅಭಿವೃದ್ಧಿ, ಭೂತಾರಾಧನೆ, ಧಾರ್ಮಿಕ ಸೇವೆ, ದೇವಸ್ಥಾನಗಳ ಜೀರ್ಣೋದ್ಧಾರ ಮೊದಲಾದ ಕೈಂಕರ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. ತಮ್ಮ ಜೀವನಕ್ಕೆ ನೆಲೆ ನೀಡಿದ ನಗರಗಳಲ್ಲಿ ಬಂಟರ ಸಂಘಗಳನ್ನು ಹಾಗೂ ಇತರ ಸಂಘ–ಸಂಸ್ಥೆಗಳನ್ನು ಸ್ಥಾಪಿಸಿ, ಆ ಮೂಲಕ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ.

ಇಂದು ಬಹಳಷ್ಟು ಬಂಟರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಈ ಆರ್ಥಿಕ ಬಿಕ್ಕಟ್ಟಿನ ಸವಾಲನ್ನು ನಾವೆಲ್ಲರೂ ಸ್ವೀಕರಿಸಿ, ಅದನ್ನು ಸಮರ್ಥವಾಗಿ ಎದುರಿಸಬೇಕಾದ ಅನಿವಾರ್ಯತೆ ಇಂದು ನಮ್ಮ ಮುಂದಿದೆ. ಹಾಗಾಗಿ, ಅಂದು ಭೂಮಸೂದೆ ಕಾಯಿದೆಯ ಸಂದರ್ಭದಲ್ಲಿ ಕೃಷಿಗೆ ಪರ್ಯಾಯವಾದ ಕ್ಷೇತ್ರವನ್ನು ಆಗ ನಾವು ಆಯ್ದುಕೊಂಡಂತೆ, ಇಂದು ಮತ್ತೊಮ್ಮೆ, ಆರ್ಥಿಕವಾಗಿ ಚೇತರಿಸಿಕೊಳ್ಳಲು ನಮ್ಮ ಜೀವನ ಶೈಲಿಯನ್ನು, ಜೀವನೋಪಾಯದ ಮಾರ್ಗವನ್ನು ಬದಲಾಯಿಸಿಕೊಂಡು, ನೂತನ ದೃಷ್ಟಿಕೋನದಿಂದ (VISION) ಹೊಸ ವ್ಯವಸ್ಥೆಯನ್ನು ನಾವು ನೋಡಬೇಕಾಗಿದೆ. ನಮ್ಮ ವ್ಯವಹಾರಗಳನ್ನು ಆನ್‌ಲೈನ್ ಹಾಗೂ ನೂತನ ತಂತ್ರಜ್ಞಾನಗಳೊಂದಿಗೆ ವಿಲೀನಗೊಳಿಸಲು ಮಾನಸಿಕವಾಗಿ ಹಾಗೂ ಪ್ರಾಯೋಗಿಕವಾಗಿ ಸನ್ನದ್ಧರಾಗುವುದು ಈಗ ಅನಿವಾರ್ಯ ಹಾಗೂ ಸಕಾಲ. ಹಾಗಿದ್ದರೆ ಮಾತ್ರವೇ, ನಾವು ಉದ್ಯೋಗ/ವ್ಯವಹಾರದಲ್ಲಿ ಮುಂದುವರಿದು ಯಶಸ್ಸನ್ನು ಕಾಣಬಹುದು. ಈಗ ಸಮಾಜವೇ ನಮ್ಮಲ್ಲಿ ಬದಲಾವಣೆ ಕೇಳುತ್ತಿದೆ, ಅದಕ್ಕಾಗಿ ನಾವೆಲ್ಲರೂ ಆತ್ಮವಿಶ್ವಾಸದಿಂದ ಸನ್ನದ್ಧರಾಗಿ, ಹೊಸ ಉದ್ಯಮದತ್ತ ಗಮನ ಹರಿಸೋಣ.

ನಾಯಕನು ಯಾವತ್ತೂ ವಿಭಿನ್ನವಾಗಿ ಚಿಂತಿಸುತ್ತಾನೆ, ಎನ್ನುವುದಕ್ಕೆ ಉದಾಹರಣೆಯಾಗಿ ಬಂಟರೆಲ್ಲರೂ ನಾಯಕರಾಗಿ ಚಿಂತಿಸೋಣ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಮಾನ್ಯ ಸದಸ್ಯರೇ,

ಸದಸ್ಯರ ಮತ್ತು ಸಂಘದ ನಡುವೆ ಸಂಪರ್ಕ ಸೇತುವೆಯಾಗಿರುವ ಸಂಘದ ಮುಖವಾಣಿ 'ಸ್ನೇಹ ಚಿಂತನೆ' ಸಂಘದ ಕಾರ್ಯಚಟುವಟಿಕೆಗಳ ಸಮಗ್ರ ವಿವರಗಳನ್ನು ಸದಸ್ಯರಿಗೆ ನೀಡುತ್ತಿದೆ. ಆದರೆ, ಕಳೆದೆರಡು ತಿಂಗಳಿನಿಂದ ಲಾಕ್‌ಡೌನ್‌ನಿಂದಾಗಿ ಸ್ನೇಹ ಚಿಂತನೆಯ ಪ್ರಕಟಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿತ್ತು. ಸಂಘದ ಕಾರ್ಯಚಟುವಟಿಕೆಗಳು ಕೂಡ ಕೆಲ ತಿಂಗಳುಗಳ ಮಟ್ಟಿಗೆ ಸ್ಥಗಿತಗೊಂಡಿತ್ತು. ಹೆಚ್ಚಿನ ಸದಸ್ಯ ಬಾಂಧವರ ವ್ಯಾಪಾರ-ವಹಿವಾಟು, ಉದ್ಯೋಗಕ್ಕೂ ತೊಂದರೆಯಾಗಿ ಅವರೆಲ್ಲರೂ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿರುವುದು ಬೇಸರದ ಸಂಗತಿ.

ಸಂಘದ ಎಲ್ಲಾ ಕಾರ್ಯಚಟುವಟಿಕೆಗಳು ಹಾಗೂ ಚಾರಿಟಿ ಕಾರ್ಯಕ್ರಮಗಳಿಗೆ ಸಂಘದ ಸಭಾಭವನದ ಆದಾಯವೊಂದೇ ಪ್ರಮುಖ ಆಧಾರವಾಗಿರುವುದು ತಮಗೆಲ್ಲ ತಿಳಿದಿದೆ. ಪ್ರಸುತ ಪರಿಸ್ಥಿತಿಯಲ್ಲಿ ಸಭಾಭವನ ಹಾಗೂ ಸೆಮಿನಾರ್ ಹಾಲ್‌ನಲ್ಲಿ ಯಾವುದೇ ಕಾರ್ಯಕ್ರಮಗಳು ನಡೆಯದೇ ಇರುವುದರಿಂದ ಸಂಘಕ್ಕೆ ಬರುವ ಆದಾಯ ಸಂಪೂರ್ಣ ಸ್ಥಗಿತಗೊಂಡಿದೆ. ಇನ್ನೂ ಸುಮಾರು ತಿಂಗಳುಗಳ ಕಾಲ ಆದಾಯ ನಿರೀಕ್ಷಿಸಲಾಗದು. ಆದರೆ, ಎಲ್ಲಾ ಅಡೆ-ತಡೆಗಳನ್ನು ಮೀರಿ ಸಂಘದ ಕಾರ್ಯಚಟುವಟಿಕೆಗಳನ್ನು ಹೊಸ ರೂಪದೊಂದಿಗೆ ಕಾರ್ಯರೂಪಕ್ಕೆ ತರಲು ತಮ್ಮೆಲ್ಲರ ಮಾರ್ಗದರ್ಶನದಲ್ಲಿ ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರ ನೇತೃತ್ವದಲ್ಲಿ ನಮ್ಮ ಕಾರ್ಯಕಾರಿ ಸಮಿತಿಯು ಅಣಿಯಾಗುತ್ತಿದೆ.

ಲಾಕ್‌ಡೌನ್‌ನಿಂದ ತಮ್ಮ ತಮ್ಮ ಊರುಗಳನ್ನು ಸೇರಿಕೊಂಡ ಸಮುದಾಯ ಬಾಂಧವರು ಸಾರ್ವಜನಿಕ ಸಾರಿಗೆ ವ್ಯವಸ್ಥೆಯಿಲ್ಲದೇ ತೊಂದರೆ ಪಡುತ್ತಿದ್ದ ಸಂದರ್ಭದಲ್ಲಿ, ಸದಸ್ಯರೆಲ್ಲರಿಗೂ ಎಸ್.ಎಂ.ಎಸ್. ಮೂಲಕ ಸಂದೇಶ ಕಳುಹಿಸಿ ಅಗತ್ಯವಿರುವವರಿಗೆ ಬೆಂಗಳೂರಿಗೆ ಬರಲು ಬಸ್ ವ್ಯವಸ್ಥೆ ಕಲ್ಪಿಸಲಾಗಿತ್ತು. ಸುಮಾರು 150 ಜನರು ಈ ಸೌಲಭ್ಯವನ್ನು ಪಡೆದು ಬೆಂಗಳೂರಿಗೆ ಬಂದು ತಮ್ಮ ಕೆಲಸಗಳನ್ನು ಪ್ರಾರಂಭಿಸಿದ್ದಾರೆ.

ಆರ್ಥಿಕವಾಗಿ ತೊಂದರೆಯಲ್ಲಿರುವ ಸದಸ್ಯರುಗಳು ತಮ್ಮ ಕುಟುಂಬಕ್ಕೆ ಬೇಕಾಗಿರುವ ದಿನಸಿ ಸಾಮಗ್ರಿಯ ಕಿಟ್ ಸಂಘದ ಕಛೇರಿಯಿಂದ ಪಡೆಯುವಂತೆ ಮಾಹಿತಿ ನೀಡಲಾಗಿತ್ತು. ದಿನಾಂಕ 03.06.2020 ರಂದು ಗೋವಿಂದರಾಜ ನಗರ ವಾರ್ಡ್‌ನ ಕಾರ್ಪೋರೇಟರ್ ಶ್ರೀ ಕೆ. ಉಮೇಶ್ ಶೆಟ್ಟಿಯವರ ಸಮ್ಮುಖದಲ್ಲಿ ಸಂಘದ ಸದಸ್ಯರು ಹಾಗೂ ಇತರ ಕಾರ್ಮಿಕರುಗಳಿಗೆ ದಿನಸಿ ಕಿಟ್‌ಗಳನ್ನು ವಿತರಿಸಲಾಯಿತು. ಇದುವರೆಗೆ ಸುಮಾರು 335 ಕ್ಕೂ ಹೆಚ್ಚು ಕುಟುಂಬಗಳು ಈ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ. ಈ ಯೋಜನೆಗೆ ಉದಾರ ದೇಣಿಗೆ ನೀಡಿ ಸಹಕರಿಸಿದ ಎಲ್ಲಾ ದಾನಿಗಳಿಗೆ ಸಂಘವು ಅಭಾರಿಯಾಗಿದೆ.

ಬೆಂಗಳೂರಿನ ಹಾಗೂ ಕರಾವಳಿಯ ಗ್ರಾಮೀಣ ಭಾಗದ ಆರ್ಥಿಕವಾಗಿ ಹಿಂದುಳಿದ ಪ್ರತಿಭಾನ್ವಿತ ಬಂಟ ಸಮುದಾಯದ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಕಲ್ಪಿಸುವ ನಿಟ್ಟಿನಲ್ಲಿ ಜಾರಿಗೆ ತಂದಿರುವ ನೂತನ ಯೋಜನೆಯಡಿಯಲ್ಲಿ ಪದವಿಪೂರ್ವ ವಿದ್ಯಾಭ್ಯಾಸ (ಪಿಯುಸಿ) ಪಡೆಯಲಿಚ್ಛಿಸುವ ಅರ್ಹ ಫಲಾನುಭವಿಗಳಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಸಂಸ್ಥೆಯಲ್ಲಿ ಉಚಿತ ಶಿಕ್ಷಣ ಹಾಗೂ ವಸತಿ ವ್ಯವಸ್ಥೆ ಕಲ್ಪಿಸಲು ತೀರ್ಮಾನಿಸಲಾಗಿದೆ. ಆಸಕ್ತರು ಹೆಚ್ಚಿನ ವಿವರಗಳನ್ನು ಸಂಘದ ಕಛೇರಿ/ ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ.

ನಮ್ಮ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಶಾಲೆ ಹಾಗೂ ಪಿಯುಸಿ ಕಾಲೇಜಿನಲ್ಲಿ ಮಕ್ಕಳ ಪಠ್ಯಚಟುವಟಿಕೆಗಳಿಗೆ ತೊಂದರೆಯಾಗದಂತೆ ಆನ್‌ಲೈನ್ ತರಗತಿಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಆನ್‌ಲೈನ್ ತರಗತಿಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಮಕ್ಕಳಿಗೆ ತೊಂದರೆಯಾಗದಂತೆ ಪಾಠದ ವಿವರಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸಲು ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ವಿಶ್ವಪರಿಸರ ದಿನದ ಪ್ರಯುಕ್ತ ಸಂಘದ ನೇತೃತ್ವದಲ್ಲಿ ಸಮಾಜ ಸೇವಾ ಸಮಿತಿ ಹಾಗೂ ಸೇವಾದಳದ ವತಿಯಿಂದ ಸಂಘದ ತಾರಸಿ ತೋಟದಲ್ಲಿ ಹಾಗೂ ಸಂಕೀರ್ಣದ ಆಯ್ದ ಜಾಗಗಳಲ್ಲಿ ವಿವಿಧ ಉಪಯುಕ್ತ ತರಕಾರಿ, ಹೂವು, ಗಿಡಮೂಲಿಕೆ ಹಾಗೂ ಹಣ್ಣಿನ ಸಸ್ಯಗಳನ್ನು ನೆಡಲಾಯಿತು. ವಿಭಿನ್ನ ಕಾರ್ಯಕ್ರಮ ಆಯೋಜಿಸಿದ ಸಮಾಜ ಸೇವಾ ಸಮಿತಿ ಹಾಗೂ ಸೇವಾದಳದ ಚೇರ್‌ಪರ್ಸನ್ ಶ್ರೀ ಎಂ.ಬಿ.ಉಮೇಶ್ ಶೆಟ್ಟಿ, ಸೇವಾದಳದ ಸಂಚಾಲಕರಾದ ಶ್ರೀ ಭಾಸ್ಕರ್ ಶೆಟ್ಟಿ, ಸಮಾಜ ಸೇವಾ ಸಮಿತಿಯ ಸಂಚಾಲಕ ಶ್ರೀ ಅಜಿತ್ ಶೆಟ್ಟಿ ಉಳ್ತೂರು ಹಾಗೂ ತಂಡದ ಎಲ್ಲಾ ಸದಸ್ಯರಿಗೆ ಅಭಿನಂದನೆಗಳು.

ಸಂಘವನ್ನು ಸಮರ್ಥವಾಗಿ ಹಾಗೂ ಸಂಘದ ಮೂಲ ಧ್ಯೇಯೋದ್ದೇಶಗಳಿಗೆ ಧಕ್ಕೆಯಾಗದಂತೆ ಮುನ್ನಡೆಸಲು ತಮ್ಮೆಲ್ಲರ ಅಮೂಲ್ಯ ಸಲಹೆ-ಸಹಕಾರ ಹಾಗೂ ಮಾರ್ಗದರ್ಶನವನ್ನು ನೀಡಬೇಕೆಂದು ಈ ಮೂಲಕ ಕೋರುತ್ತಿದ್ದೇನೆ.

ವಂದನೆಗಳೊಂದಿಗೆ,

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ಬಂಟರ ಸಂಘ ಬೆಂಗಳೂರು
## ಮಹಿಳಾ ವಿಭಾಗ – ನಡೆದು ಬಂದ ದಾರಿ – 2018–2020

ಶ್ರೀಮತಿ ಜಯಶ್ರೀ ಸಿ. ರೈಯವರು ಚೇರ್‌ಪರ್ಸನ್‌ರಾಗಿ ಹಾಗೂ ಶ್ರೀಮತಿ ಯೋಗ್ಯ ಎಲ್. ರೈಯವರು ಸಂಚಾಲಕಿಯಾಗಿರುವ ಮಹಿಳಾ ವಿಭಾಗವು ವಸತಿ ಗೃಹದ ಉಸ್ತುವಾರಿಯನ್ನೂ ನಿರ್ವಹಿಸುತ್ತಿದೆ.

ದಿನಾಂಕ 08.09.2018ರಂದು ಪ್ರಪ್ರಥಮವಾಗಿ ಮಹಿಳೆಯರಿಗೋಸ್ಕರ ವಿವಿಧ ಆಟೋಟ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ದಿನಾಂಕ 13.10.2018ರಂದು ಆಯೋಜಿಸಿದ್ದ ನವರಾತ್ರಿ ಉತ್ಸವದಲ್ಲಿ ದೇವಿ ಪೂಜೆ, ಲಲಿತ ಸಹಸ್ರನಾಮ, ಸತ್ಸಂಗ ಹಾಗೂ ವಿವಿಧ ಬಡಾವಣೆಯ ಸದಸ್ಯೆಯರಿಂದ ದಾಂಡಿಯಾ ನೃತ್ಯವನ್ನು ಏರ್ಪಡಿಸಲಾಗಿತ್ತು.



ದಿನಾಂಕ 09.03.2019ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ ಆಯೋಜಿಸಿದ "ಧಾತ್ರಿ" ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಉದ್ಘಾಟಿಸಿದರು. ನಂತರ ಜರುಗಿದ ವಿಚಾರ ಸಂಕಿರಣದಲ್ಲಿ ಉದ್ಯಮ ಕ್ಷೇತ್ರ, ದೃಶ್ಯ ಮತ್ತು ಮುದ್ರಣ ಮಾಧ್ಯಮ ಹಾಗೂ ಸೌಂದರ್ಯ ಮತ್ತು ಫ್ಯಾಷನ್ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಶ್ರೀಮತಿ ಪದ್ಮಾ ಶೇಷಾದ್ರಿ, ಶ್ರೀಮತಿ ನೀತಾ ಅಡಪ, ಶ್ರೀಮತಿ ವಿಜಯಲಕ್ಷ್ಮೀ ಶಿಬರೂರು, ಶ್ರೀಮತಿ ರೋಹಿಣಿ ಶೆಟ್ಟಿ ಮುಂಡಾಜೆ, ಡಾ. ರಶ್ಮಿ ರೈ ಮತ್ತು ಕುಮಾರಿ ಶೈಮಾ ಶೆಟ್ಟಿಯವರು ಸೊಗಸಾಗಿ ವಿಚಾರ ಮಂಡಿಸಿದರು. ಅವರೊಂದಿಗೆ ಸಭಿಕರು ಸಂವಾದ ನಡೆಸಿದರು.

ಸಮಾರೋಪ ಸಮಾರಂಭಕ್ಕೆ ಆಗಮಿಸಿದ ಮುಖ್ಯ ಅತಿಥಿ ಡಾ. ಬಿ. ಆರ್ ಮಮತ, ಐ.ಎ.ಎಸ್, ಸೆಷನ್ ಕೋರ್ಟ್ ನ್ಯಾಯಾಧೀಶೆ ಶ್ರೀಮತಿ ವಿನಿತಾ ಪಿ. ಶೆಟ್ಟಿ, ಆರೋಗ್ಯ ಮತ್ತು ಫಿಟ್‌ನೆಸ್ ತಜ್ಞೆ ಶ್ರೀಮತಿ ವನಿತಾ ಅಶೋಕ್ ಭಾಗವಹಿಸಿದ್ದರು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಶ್ರೀಮತಿ ವನಮಾಲ ಸಂಪನ್ನ ಕುಮಾರ್‌ರವರನ್ನು ಸನ್ಮಾನಿಸಲಾಯಿತು. ಕಾರ್ಕಳದ ವಿಜೇತ ವಿಶೇಷ ಬುದ್ಧಿಮಾಂದ್ಯ ಮಕ್ಕಳ ಶಾಲೆಯ ಡಾ. ಕಾಂತಿ ಹರೀಶ್‌ರವರನ್ನು ಸನ್ಮಾನಿಸಿ, ಬೆಂಗಳೂರು ಬಂಟರ ಸಂಘದ 60ರ ಸಂಭ್ರಮದ ಸ್ಮರಣಾರ್ಥ 60,000/– ರೂಗಳ ಸಹಾಯಧನ ನೀಡಲಾಯಿತು.




ಕಾರ್ಯಕ್ರಮದಲ್ಲಿ ಕುಮಾರಿ ನಿವ್ಯಾ ಪಿ. ಶೆಟ್ಟಿ, ಐ.ಆರ್.ಎಸ್, ಹಾಗೂ ಕರ್ನಾಟಕ ಲೆಕ್ಕ ಪತ್ರ ಇಲಾಖೆಯ ಉಪ ನಿರ್ದೇಶಕರಾದ ಕುಮಾರಿ ಕವಿತ ಎ. ಶೆಟ್ಟಿಯವರನ್ನು ಗೌರವಿಸಲಾಯಿತು. ಉದಯೋನ್ಮುಖ ಪ್ರತಿಭೆಗಳಾದ ಕುಮಾರಿ ಲಾವಣ್ಯ ರೈ, ಕುಮಾರಿ ಲೇಖನ ಹೆಗ್ಡೆ, ಕುಮಾರಿ ನಿಧಿ ಶೆಟ್ಟಿ, ಕುಮಾರಿ ಅನನ್ಯ ಶೆಟ್ಟಿ ಹಾಗೂ ಕುಮಾರಿ ಅದ್ವಿಕಾ ಶೆಟ್ಟಿಯವರಿಗೆ ತಲಾ

5,000/–ರೂ. ಗಳನ್ನು ಚಾರಿಟೇಬಲ್ ನೆಲೆಯಲ್ಲಿ ನೀಡಿ ಪ್ರೋತ್ಸಾಹಿಸಲಾಯಿತು. ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II ನೇ ಶೈಕ್ಷಣಿಕ ಯೋಜನೆಗೆ ಮಹಿಳಾ ವಿಭಾಗದ ವತಿಯಿಂದ ರೂ. 1,00,000ಗಳನ್ನು ಸಮಿತಿಯ ಸದಸ್ಯೆಯರು ಸಂಘದ ಅಧ್ಯಕ್ಷರಿಗೆ ಹಸ್ತಾಂತರಿಸಿದರು. ವಿವಿಧ ಬಡಾವಣೆಯ ಸದಸ್ಯೆಯರು, ಸಂಘದ ಪುಟಾಣಿಗಳು, ಯುವತಿಯರು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದವರ ಮೆಚ್ಚುಗೆ ಗಳಿಸಿತು.

ದಿನಾಂಕ 15.06.2019ರಂದು ಚನ್‌ರೇ ಡಯೋಗ್ನಸ್ಟಿಕ್‌ನ ಡಾ। ಪ್ರಕೃತಿ ಜೆ.ಯವರು ಆಗಮಿಸಿ ಮಹಿಳೆಯರಿಗೆ ಪ್ರಯೋಜನಕಾರಿಯಾದ ಆಸ್ಟಿಯೋಪೊರೋಸಿಸ್‌ನ ಬಗ್ಗೆ ವಿವರವಾಗಿ ತಿಳಿಸಿದ್ದಲ್ಲದೆ ದೈನಂದಿನ ಜೀವನಕ್ರಮ, ಆಹಾರಕ್ರಮ, ಪಥ್ಯ, ಮೂಳೆ ಸವೆತದ ಬಗ್ಗೆ ಹಾಗೂ ವ್ಯಾಯಾಮ ಮಾಡುವ ವಿಧಾನವನ್ನು ತಿಳಿಸಿದರು. ದಿನಾಂಕ 24.07.2019ರಂದು "ಗುಬ್ಬಿಗೂಡು" ಎಂಬಲ್ಲಿಗೆ ಸುಮಾರು 50 ಮಹಿಳೆಯರನ್ನೊಳಗೊಂಡು ಒಂದು ದಿನದ ಕಿರು ಪ್ರವಾಸವನ್ನು ಏರ್ಪಡಿಸಲಾಗಿತ್ತು. ಎಲ್ಲಾ ಮಹಿಳೆಯರು ತಮ್ಮ ವಯಸ್ಸನ್ನು ಮರೆತು ನಕ್ಕು ನಲಿದಾಡಿದರು.




ದಿನಾಂಕ 24.08.2019ರಂದು ಸಂಘದ ಗೌರವಾನ್ವಿತ ಸದಸ್ಯೆ ಶ್ರೀಮತಿ ರಾಜಶ್ರೀ ಕೆ. ಶೆಟ್ಟಿಯವರು ನಡೆಸಿಕೊಟ್ಟ ತ್ಯಾಜ್ಯ ನಿರ್ವಹಣೆ ಹಾಗೂ ತಾರಸಿ ತೋಟದ ಬಗ್ಗೆ ಮಾಹಿತಿ ಹಾಗೂ ಮಾರ್ಗದರ್ಶನ ತುಂಬಾ ಉಪಯುಕ್ತವಾಗಿತ್ತು. ಸುಲಭವಾಗಿ ಗೊಬ್ಬರ ತಯಾರಿ, ತಾರಸಿ ತೋಟದಿಂದಾಗುವ ಉಪಯೋಗ, ಸಿಗುವ ಮನಃ ಸಂತೋಷ ಎಲ್ಲವನ್ನೂ ವಿವರವಾಗಿ ತಿಳಿಸಿಕೊಟ್ಟರು.

ಮತ್ತೊಮ್ಮೆ ಚಾರಿಟೇಬಲ್ ನೆಲೆಯಲ್ಲಿ ದಿನಾಂಕ 07.09.2019ರಂದು ಸುಮಾರು 30 ಬುದ್ಧಿಮಾಂಧ್ಯ ಮಕ್ಕಳು, ಯುವಕರು, ಹಿರಿಯ ಜೀವಗಳನ್ನು ತಾಯಿಯಂತೆ ಪೊರೆಯುವ ಶ್ರೀ ಪರಿಪೂರ್ಣ ಸನಾತನ ಚಾರಿಟೇಬಲ್ ಟ್ರಸ್ಟ್‌ನ ಅಂಗ ಸಂಸ್ಥೆಯಾದ ಭಕ್ತರ ಹಳ್ಳಿಯ ಆಶ್ರಮಕ್ಕೆ ಭೇಟಿ ನೀಡಿದ್ದು ಇಡೀ ದಿನವನ್ನು ಅರ್ಥ ಪೂರ್ಣವಾಗಿಸಿತು. ಏನೇ ಮಾಡಿದರೂ, ನೀಡಿದರೂ ಅದು ಪ್ರಯೋಜನಕಾರಿಯಾಗಬೇಕೆಂಬ ನಿಟ್ಟಿನಲ್ಲಿ ಹಣ್ಣು, ಹೊಸ ಉಡುಪುಗಳು, ನಿತ್ಯ ಬಳಕೆಯ ಬಟ್ಟೆಗಳು, ದೈನಂದಿನ ಚಟುವಟಿಕೆಗಳಿಗೆ ಅಗತ್ಯವಾದ ಸಾಮಾಗ್ರಿಗಳು, ದಿನಸಿ, ಆರೋಗ್ಯಯುತ ತಿಂಡಿ–ತಿನಿಸುಗಳನ್ನು ನೀಡಿದ ಮಹಿಳಾ ವಿಭಾಗದ ವಿನೂತನ ಸಹಕಾರ ಆಶ್ರಮದ ಸಿಬ್ಬಂದಿ ವರ್ಗಕ್ಕೆ ಹುಮ್ಮಸ್ಸು ತುಂಬಿತು.



ಟ್ರಸ್ಟ್‌ನ ಸ್ವಾಮೀಜಿಗಳಾದ ಪ್ರೊಫೆಸರ್ ಡಾ. ಎ.ವಿ. ಶ್ರೀನಿವಾಸನ್‌ರವರು ಮಹಿಳಾ ವಿಭಾಗದ ಸೇವಾ ಕೈಂಕರ್ಯವನ್ನು ಶ್ಲಾಘಿಸಿದರು. ನಮ್ಮೀ ಕಾರ್ಯಕ್ರಮಕ್ಕೆ ಸಂಪೂರ್ಣ ಬೆಂಬಲ, ಸಹಕಾರ ನೀಡಿದವರು ಸಂಘದ ಪದಾಧಿಕಾರಿಗಳು, ಮಹಿಳಾ ವಿಭಾಗದ ಸದಸ್ಯೆಯರಲ್ಲದೆ ಸಂಘದ ಇತರ ಸದಸ್ಯೆಯರು ಕೂಡಾ. ಇವರೆಲ್ಲರಿಗೂ ಮಹಿಳಾ ವಿಭಾಗವು ಆಭಾರಿಯಾಗಿದೆ.

ದಿನಾಂಕ 05.10.2019ರಂದು ನಡೆದ ನವರಾತ್ರಿ ಉತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು.



ಸರ್ವಾಲಂಕಾರಗೊಂಡ ದೇವಿಗೆ ಪೂಜೆ, ಲಲಿತ ಸಹಸ್ರನಾಮ, ಭಜನೆಯ ತರುವಾಯ ಸಂಘದ ಆವರಣದಲ್ಲಿ ನಡೆದ ವಿವಿಧ ಆರೇಳು ತಂಡಗಳು ಬಣ್ಣ ಬಣ್ಣದ ಉಡುಗೆ ತೊಡುಗೆಗಳಿಂದ ಹಿರಿಯರು, ಕಿರಿಯರೆನ್ನದೆ ನರ್ತಿಸಿದ ದಾಂಡಿಯಾ ನೃತ್ಯವಂತೂ ಅಪ್ಸರೆಯನ್ನೂ ನಾಚಿಸುವಂತಿತ್ತು. ಈ ಕಾರ್ಯಕ್ರಮಕ್ಕೆ "ಹೊಸ ಚಿಗುರು ಹಳೇ ಬೇರು ಕೂಡಿರಲು ಮರ ಸೊಬಗು" ಎಂಬ ಕಗ್ಗದ ಮಾತಿನಂತೆ ಸಂಘದ ಹಿರಿಯರು ಮಾಜಿ ಪದಾಧಿಕಾರಿಗಳು ವಿವಿಧ ಸಮಿತಿಯ ಸದಸ್ಯೆಯರು ಆಗಮಿಸಿದ್ದು ಸಂತೋಷವನ್ನುಂಟು ಮಾಡಿತು.

ಮರೆಯಲಾರದ ಮರೆಯಬಾರದ ಮಹಿಳಾ ವಿಭಾಗದ ಮಾಜಿ ಚೇರ್‌ಪರ್ಸನ್ ಹಾಗೂ ಸಂಘದ ಮಾಜಿ ಉಪಾಧ್ಯಕ್ಷೆಯಾದ ಶ್ರೀಮತಿ ರತ್ನಾ ಎಸ್. ರೈಯವರ ನಿಧನದ ಪ್ರಯುಕ್ತ ದಿನಾಂಕ 12.10.2019ರಂದು ಶ್ರದ್ಧಾಂಜಲಿ ಸಭೆಯನ್ನು ಮಹಿಳಾ ವಿಭಾಗವು ಹಮ್ಮಿಕೊಂಡಿತ್ತು. ಸಂಘದ ಪದಾಧಿಕಾರಿಗಳಲ್ಲದೆ ಅಂದಿನ ತಲೆಮಾರಿನ ಹಿರಿಯರು ಅವರ ಒಡನಾಡಿಗಳೆಲ್ಲರೂ ಆಗಮಿಸಿ ಶ್ರದ್ಧಾಂಜಲಿ ಸಲ್ಲಿಸಿದರು.



ಕ್ರಿಯಾಶೀಲ ಚಟುವಟಿಕೆಗಳ ಸಾಲಿನಲ್ಲಿ ದಿನಾಂಕ 09.02.2020ರಂದು ಬಿ.ಆರ್.ಎಸ್. ಮಹಿಳಾ ವಸತಿ ಗೃಹದ ವಾರ್ಷಿಕೋತ್ಸವವನ್ನು ಅತ್ಯಂತ ಸರಳ ಹಾಗೂ ವಿನೂತನ ರೀತಿಯಲ್ಲಿ ಆಚರಿಸಲಾಯಿತು. ವಾರ್ಷಿಕೋತ್ಸವದ ನಿಮಿತ್ತ ವಿವಿಧ ಆಟೋಟಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ವಿತರಣೆ ಹಾಗೂ ಸಹ ನಿವಾಸಿಗಳಿಂದ ಅನೇಕ ವೈವಿಧ್ಯಮಯ ಮನೋರಂಜನಾ ಕಾರ್ಯಕ್ರಮಗಳು ನಡೆದವು. ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಮಾಜಿ ಸದಸ್ಯೆಯರು ಆಗಮಿಸಿದ್ದು ಕಾರ್ಯಕ್ರಮ ಕಳೆಗಟ್ಟಿತು.

ದಿನಾಂಕ 14.03.2020ರಂದು ಅಂತಾರಾಷ್ಟ್ರೀಯ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆಗಳ ಜೊತೆಗೆ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಿದ್ಧತೆಯಲ್ಲಿದ್ದರೂ ಸರಕಾರದಿಂದ ಬಂದ ಆದೇಶದಂತೆ ನಾವು ನಿರಾಶರಾಗಬೇಕಾಯ್ತು. ಮುಂದಕ್ಕೆ ಈ ಕಾರ್ಯಕ್ರಮ ನಡೆಸೋಣ ಎಂಬ ಆಶಯದೊಂದಿಗೆ ವಾರ್ಷಿಕ ವರದಿಗೊಂದು ಮುಕ್ತಾಯದ ಚುಕ್ಕಿಯನ್ನಿಡುತ್ತಿದ್ದೇವೆ.

**ಯೋಗ್ಯ ಎಲ್. ರೈ**
ಸಂಚಾಲಕಿ, ಮಹಿಳಾ ವಿಭಾಗ

**ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಮಹಿಳಾ ವಿಭಾಗ

# ಬಂಟರ ಸಂಘ ಬೆಂಗಳೂರು
# ವಿವಾಹ ವೇದಿಕೆ 2018–19

2018–19ನೇ ಸಾಲಿನ ವಿವಾಹ ವೇದಿಕೆ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಕಲಾವತಿ ಬಿ. ಶೆಟ್ಟಿ, ಸಂಚಾಲಕರಾದ ಶ್ರೀ ರಮೇಶ್ ಶೆಟ್ಟಿ ಮತ್ತು ತಂಡವು ಸಂಘದ ಸದಸ್ಯರಿಗೆ ಹಾಗೂ ಸಮಾಜ ಬಾಂಧವರಿಗೆ ಸಹಾಯವಾಗುವ ನೆಲೆಯಲ್ಲಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ಸಮಿತಿಯು ಪ್ರತೀ ಶನಿವಾರದಂದು ಮಧ್ಯಾಹ್ನ 2.00 ಘಂಟೆಯಿಂದ ಸಂಜೆ 6.00 ರವರೆಗೆ ನೋಂದಾಯಿತ ಸದಸ್ಯರಿಗೆ ವಿವಾಹಾಕಾಂಕ್ಷಿಗಳ ಮಾಹಿತಿಯನ್ನು ನೀಡುವ ಕೆಲಸವನ್ನು ಮಾಡುತ್ತಿತ್ತು. ವಿವಾಹಾಕಾಂಕ್ಷಿಗಳ ಮಾಹಿತಿಯನ್ನು ಅಚ್ಚುಕಟ್ಟಾಗಿ ಸಂಗ್ರಹಿಸಿ, ತಿಂಗಳಲ್ಲಿ ಮೂರು ಬಾರಿ ಅವರನ್ನು ಫೋನ್ ಮುಖಾಂತರ ಸಂಪರ್ಕಿಸಿ ಮಾಹಿತಿ ವಿನಿಮಯ ಮಾಡಲಾಗುತ್ತಿತ್ತು. ಇದರಿಂದ ಮಾಹಿತಿ ಕೋರಿ ಬರುವ ವಿವಾಹಾಕಾಂಕ್ಷಿಗಳ ಹಾಗೂ ಪೋಷಕರ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳವಾಯಿತು. ಪೋಷಕರ ಜೊತೆಗೂಡಿ ಬರುವಂತಹ ಮದುವೆ ದಲ್ಲಾಳಿಗಳಿಗೆ ಕಡಿವಾಣ ಹಾಕುವ ಪ್ರಯತ್ನವನ್ನು ಸಹ ಮಾಡಲಾಗಿತ್ತು.

ಪ್ರತೀ ವರ್ಷವು ನಡೆಯುವಂತಹ ವಧೂ–ವರರ ಅನ್ವೇಷಣೆ ಕಾರ್ಯಕ್ರಮವನ್ನು ವಿನೂತನವಾಗಿ ಆಯೋಜಿಸಿ, ಅತೀ ಹೆಚ್ಚಿನ ಜನರಿಗೆ ಕಾರ್ಯಕ್ರಮದ ಪ್ರಯೋಜನ ಪಡೆಯುವ ನಿಟ್ಟಿನಲ್ಲಿ ಶ್ರಮಿಸಲಾಯಿತು. ದಿನಾಂಕ 10.02.2019 ರಂದು ಆಯೋಜಿಸಿದ್ದ 17 ನೇ ಬಂಟ ವಧೂ–ವರರ ಅನ್ವೇಷಣಾ ಸಮಾವೇಶವು ಯಶಸ್ವಿಯಾಗಿ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಒಳಾಂಗಣದಲ್ಲಿ ಜರುಗಿತು. ವಿವಾಹ ವೇದಿಕೆ ಸಮಿತಿಯ ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ, ಶ್ರೀಮತಿ ಅಮೃತ ವಿಜಯ್ ಕುಮಾರ್ ಶೆಟ್ಟಿ, ಶ್ರೀಮತಿ ಸುಜಾತ ಶೆಟ್ಟಿ ಪ್ರಾರ್ಥನೆಯೊಂದಿಗೆ ಸಮಾವೇಶ ಆರಂಭಗೊಂಡಿತು. ವಿವಾಹ ವೇದಿಕೆ ಚೇರ್‌ಪರ್ಸನ್ ಶ್ರೀಮತಿ ಕಲಾವತಿ ಬಿ. ಶೆಟ್ಟಿಯವರು ನೆರೆದ ಸರ್ವರನ್ನು ಸ್ವಾಗತಿಸಿ, ಈ ಕಾರ್ಯಕ್ರಮ ಆಯೋಜಿಸುವಲ್ಲಿ ವಿವಾಹ ವೇದಿಕೆಯ ಸದಸ್ಯರು ಹಾಗೂ ಸಂಘದ ಪದಾಧಿಕಾರಿಗಳ ಸಹಕಾರವನ್ನು ನೆನಪಿಸಿಕೊಂಡರು.



ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಖ್ಯಾತ ಸಾಹಿಗಳು ಮತ್ತು ಅಂಕಣಕಾರರಾದ ಡಾ। ನರೇಂದ್ರ ರೈ ದೇರ್ಲಯವರು ಬಂಟರ ಸಂಘದ ಸೇವಾ ಕಾರ್ಯಗಳನ್ನು ಶ್ಲಾಘಿಸಿ ಸಮುದಾಯದ ಅಭ್ಯುದಯಕ್ಕೆ ಸಂಘವು ಇನ್ನೂ ಹೆಚ್ಚಿನ ಕೊಡುಗೆ ನೀಡುವಂತಾಗಲಿ ಎಂದು ಹಾರೈಸಿದರು. ವಿವಾಹಾಕಾಂಕ್ಷಿಗಳನ್ನು ಉದ್ದೇಶಿಸಿ ಮಾತನಾಡಿ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವುದರೊಂದಿಗೆ ಮುಂದಿನ ಜೀವನದಲ್ಲಿ ಹೊಂದಾಣಿಕೆ ಮನೋಭಾವ ಮೈಗೂಡಿಸಿಕೊಂಡು ಅನ್ಯೋನ್ಯವಾಗಿ ಬಾಳಬೇಕೆಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಬಂಟರ ಸಂಘದ ವಿವಿಧ ಸೇವಾ ಕಾರ್ಯಗಳ ವಿವರಗಳನ್ನು ನೀಡಿದರು. ವಿವಾಹ ವೇದಿಕೆ ಆಯೋಜಿಸಿರುವ ಈ ಸಮಾವೇಶದ ಪ್ರಯೋಜನವನ್ನು ಪಡೆಯಬೇಕೆಂದು ಕರೆ ನೀಡಿದರು.

ಸಮಾವೇಶದಲ್ಲಿ ಭಾಗವಹಿಸಿದ್ದ ವಿವಾಹಾಕಾಂಕ್ಷಿಗಳ ವಿವರಗಳನ್ನು ವಿವಾಹ ವೇದಿಕೆಯ ಸದಸ್ಯರು ಸಭಿಕರಿಗೆ ವಿವರಿಸಿದರು. ಸುಮಾರು 350 ವಿವಾಹಾಕಾಂಕ್ಷಿಗಳು ಸಮಾವೇಶದಲ್ಲಿ ತಮ್ಮ ಪೋಷಕರೊಂದಿಗೆ ಭಾಗವಹಿಸಿದ್ದು, ಹೆಚ್ಚಿನ ವಿವಾಹಾಕಾಂಕ್ಷಿಗಳಿಗೆ ಪರಸ್ಪರ ಮಾತುಕತೆ ನಡೆಸಲು ಅವಕಾಶ ಕಲ್ಪಿಸಲಾಗಿತ್ತು. ಬೆಂಗಳೂರು, ದಕ್ಷಿಣಕನ್ನಡ, ಕೊಪ್ಪ, ಶಿವಮೊಗ್ಗ, ತೀರ್ಥಹಳ್ಳಿ, ಚಿಕ್ಕಮಗಳೂರು, ತುಮಕೂರು, ನಗರಗಳಿಂದ ಮಾತ್ರವಲ್ಲದೇ, ತಿರುಪತಿ, ಚೆನ್ನೈ ಮೊದಲಾದ ಹೊರರಾಜ್ಯದ ಸ್ಥಳಗಳಿಂದ ವಿವಾಹಾಕಾಂಕ್ಷಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದು ಸಮಾವೇಶದ ವಿಶೇಷವಾಗಿತ್ತು.





ಕಾರ್ಯಕ್ರಮವನ್ನು ವಿನೂತನವಾಗಿಸುವ ನಿಟ್ಟಿನಲ್ಲಿ ಹಾಗೂ ಬೆಂಗಳೂರು ಬಂಟರ ಸಂಘಕ್ಕೆ 60 ಸಂವತ್ಸರ ತುಂಬುತ್ತಿರುವ ಶುಭ ಸಂದರ್ಭದಲ್ಲಿ ವೈವಾಹಿಕ ಜೀವನದ 60 ಸಂವತ್ಸರಗಳನ್ನು ಪೂರೈಸಿ ಆದರ್ಶಮಯ ಜೀವನ ನಡೆಸುತ್ತಿರುವ ದಂಪತಿಗಳನ್ನು ಗುರುತಿಸಿ ಗೌರವಾರ್ಪಣೆ ಸಲ್ಲಿಸಲಾಯಿತು. ವಯೋಸಹಜ ಅನಾರೋಗ್ಯದಿಂದ ಕಾರ್ಯಕಮಕ್ಕೆ ಬರಲಾಗದ ದಂಪತಿಗಳ ಮನೆಗೆ ವೇದಿಕೆಯ ಸದಸ್ಯರು ಭೇಟಿ ನೀಡಿ ಅವರ ಮನೆಯಲ್ಲಿಯೇ ದಂಪತಿಗಳನ್ನು ಗೌರವಿಸಲಾಯಿತು. ನವ ವಿವಾಹಿತ ದಂಪತಿಗಳನ್ನು ಸಹ ಈ ಕಾರ್ಯಕ್ರಮಕ್ಕೆ ಆಹ್ವಾನಿಸಿ ಸಂಘದ ವತಿಯಿಂದ ಅಭಿನಂದಿಸಲಾಯಿತು. ಕಾರ್ಯಕ್ರಮವನ್ನು ಶ್ರೀ ಸತೀಶ್ ಶೆಟ್ಟಿಯವರು ಅಚ್ಚುಕಟ್ಟಾಗಿ ನಿರೂಪಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ವಿವಾಹ ವೇದಿಕೆ ಸಮಿತಿಯ ಸಂಚಾಲಕರಾದ ಶ್ರೀ ರಮೇಶ್ ಶೆಟ್ಟಿಯವರು ಕಾರ್ಯಕ್ರಮ ಆಯೋಜಿಸುವಲ್ಲಿ ಸಹಕರಿಸಿದ ಸರ್ವರಿಗೂ ವಂದನಾರ್ಪಣೆಗೈದರು.



ದಿನಾಂಕ 14.04.2019 ರಂದು ನಡೆದ ಯುಗಾದಿ (ಬಿಸು) ಆಚರಣೆ ಕಾರ್ಯಕ್ರಮದಲ್ಲಿ 60 ವರ್ಷ ಪೂರೈಸಿದ ಹಿರಿಯ ದಂಪತಿಗಳನ್ನು ಗೌರವಿಸಲಾಯಿತು.

**ಕಲಾವತಿ ಬಿ. ಶೆಟ್ಟಿ**

ಚೇರ್‌ಪರ್ಸನ್, ವಿವಾಹ ವೇದಿಕೆ ಸಮಿತಿ (2018–19)

# ವಿವಾಹ ವೇದಿಕೆ 2019–20

ದಿನಾಂಕ 08.03.2020 ಭಾನುವಾರ, ವಧೂ–ವರರ ಸಮಾವೇಶ ಅನ್ವೇಷಣೆ ಕಾರ್ಯಕ್ರಮವನ್ನು ಬಹಳ ಅರ್ಥಗರ್ಭಿತವಾಗಿ ಅಚ್ಚುಕಟ್ಟಾಗಿ ಆಯೋಜನೆ ಮಾಡಲಾಗಿತ್ತು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಖ್ಯಾತ ಲೇಖಕಿ ಶ್ರೀಮತಿ ವಿಜಯಲಕ್ಷ್ಮೀ ಪ್ರಸಾದ್ ರೈಯವರು ಆಗಮಿಸಿದ್ದರು. ವೇದಿಕೆಯಲ್ಲಿ ಸಂಘದ ಉಪಾಧ್ಯಕ್ಷರಾರುಗಳಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ, ಶ್ರೀಮತಿ ಅಮೃತಾ ಎಸ್. ಶೆಟ್ಟಿ, ಗೌರವ ಕಾರ್ಯದರ್ಶಿಯವರಾದ ಶ್ರೀ ಮಧುಕರ ಎಂ. ಶೆಟ್ಟಿ, ಜೊತೆ ಕಾರ್ಯದರ್ಶಿಯವರಾದ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಖಜಾಂಚಿಯವರಾದ ಶ್ರೀ ದೀಪಕ್ ಶೆಟ್ಟಿ, ವಿವಾಹ ವೇದಿಕೆ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ತಾರಾಮಣಿ ಹೆಗ್ಡೆ, ಸಂಚಾಲಕರಾದ ಶ್ರೀ ಸುಧಾಕರ ಶೆಟ್ಟಿಯವರು ಉಪಸ್ಥಿತರಿದ್ದರು.

ಪ್ರಾಸ್ತಾವಿಕ ಭಾಷಣ ಮಾಡಿದ ಶ್ರೀ ಮುರಲೀಧರ ಹೆಗ್ಡೆಯವರು ಸಮಾಜದ ಒಳಿತಿಗಾಗಿ ನಾವು ಹತ್ತಾರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಅದರಲ್ಲಿ ವಿವಾಹ ವೇದಿಕೆಯ ವತಿಯಿಂದ ತಮಗೆಲ್ಲರಿಗೂ ಉಪಯೋಗ ಆಗುವಂತೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಇದರ ಉಪಯೋಗವನ್ನು ತಾವೆಲ್ಲ ಬಳಸಿಕೊಳ್ಳಬೇಕೆಂದು ಆಗ್ರಹಿಸಿದರು.

ಈ ಸುಂದರವಾದ ಕಾರ್ಯಕ್ರಮಕ್ಕೆ ಅನ್ವೇಷಣೆ ಎಂದು ಹೆಸರು ಇಡಲಾಗಿತ್ತು. ವೇದಿಕೆ ಹಾಗೂ ಸಭಾಂಗಣವನ್ನು ಮದುವೆ ಮನೆಗೆ ತಯಾರಾದಂತೆ ಸಿಂಗರಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಬಂಟ ಸಮಾಜವು ಹಲವು ಧರ್ಮ ಕಾರ್ಯಗಳಲ್ಲಿ ಹಾಗೂ ಸಮಾಜ ಮುಖಿ ಕಾರ್ಯಕ್ರಮಗಳಲ್ಲಿ ಸಮಾಜವು ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ ಹಾಗೆಯೇ ನಮ್ಮ ಬೆಂಗಳೂರು ಬಂಟರ ಸಂಘ ಸಮಾಜ ಬಾಂಧವರಿಗೆ ಶ್ರೀಮತಿ ತಾರಾಮಣಿ ಹೆಗ್ಡೆಯವರ ನೇತೃತ್ವದಿಂದ ವಿವಾಹ ವೇದಿಕೆ ಸಮಿತಿಯ ವತಿಯಿಂದ ಪ್ರಮುಖವಾದ ಕಾರ್ಯಕ್ರಮದ ಆಯೋಜನೆ ಮಾಡಿದೆ. ನಮ್ಮ ಬಂಟ ಸಮಾಜ ಈ ಕಾರ್ಯಕ್ರಮದ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಹೇಳಿದರು.





ಲೇಖಕಿ ಶ್ರೀಮತಿ ವಿಜಯಲಕ್ಷ್ಮಿ ಪ್ರಸಾದ್ ರೈಯವರು ಮಾತನಾಡಿ ನಾವುಗಳು ಬಂಟ ಸಮಾಜದಲ್ಲಿ ಹುಟ್ಟಿ, ಜವಾಬ್ದಾರಿಯಿಂದ ಕೆಲಸಗಳನ್ನು ಮಾಡಿ ಸಮಾಜಕ್ಕೆ ಗೌರವವನ್ನು ತಂದು, ಸಮಾಜದ ಒಳಿತಿಗಾಗಿ ಶ್ರಮಿಸಿದ್ದೇವೆ. ನಾವುಗಳು ಇಂದಿನ ಯುವ ಪೀಳಿಗೆಯನ್ನು ಬೆಳೆಸೋಣ. ಹಿರಿಯರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ನಮ್ಮ ಇಂದಿನ ಯುವಕ–ಯುವತಿಯರನ್ನು ಬೆಳೆಸೋಣ. ಹಾಗೂ ಮದುವೆಯ ಬಂಧನವನ್ನು ಗಟ್ಟಿಗೊಳಿಸೋಣ ಎಂದರು.

ಯುವ ಪೀಳಿಗೆಗೆ ಮಾದರಿಯಾಗಲೆಂದು ಸರಿ ಸುಮಾರು 50 ವರ್ಷ ಸಂಸಾರ ಜೀವನ ನಡೆಸಿದ 17 ಜನ ದಂಪತಿಗಳನ್ನು ವೇದಿಕೆಗೆ ಕರೆಸಿ ಹೂವಿನ ಹಾರವನ್ನು ಬದಲಾಯಿಸುವ ಮೂಲಕ ನೆರೆದಿರುವ ಸಭಿಕರಿಗೆ ಹಾಗೂ ಯುವ ಜನತೆಗೆ ಮಾದರಿಯಾದಂತಿತ್ತು.

ಈ ಸುಂದರವಾದ ಕಾರ್ಯಕ್ರಮಕ್ಕೆ ಪ್ರಾಯೋಜಕರಾಗಿ ಶ್ರೀ ಅರವಿಂದ ಶೆಟ್ಟಿ, ಮೈತ್ರಿ ಸಂತೋಷ್ ಶೆಟ್ಟಿ, ಶ್ರೀಮತಿ ರೋಹಿಣಿ ಜಿ. ಶೆಟ್ಟಿ, ನವರತ್ನ ಜ್ಯುವೆಲ್ಲರ್ಸ್ ರಾಜಾಜಿನಗರ, ಶ್ರೀಮತಿ ಸುಜಯ ಜಯಪ್ರಸಾದ್ ಶೆಟ್ಟಿ, ಶ್ರೀಮತಿ ಸೌಮ್ಯ ರೈ, ಶ್ರೀ ರಾಜೇಶ್ ಶೆಟ್ಟಿ ಕುತ್ಯಾರ್, ಶ್ರೀಮತಿ ಮೀರಾ ವಿನಯ್ ಶೆಟ್ಟಿ, ಶ್ರೀಮತಿ ಶಮಿತ ಶೆಟ್ಟಿ, ಶ್ರೀ ರಮೇಶ್ ಶೆಟ್ಟಿ, ಶ್ರೀ ದಿನೇಶ್ ಹೆಗ್ಡೆ, ಶ್ರೀಮತಿ ಹೀರಾ ಹೆಗ್ಡೆ, ಶ್ರೀಮತಿ ಸರ್ವಾಣಿ ಜಿ. ರೈ, ಶ್ರೀ ಸುಧಾಕರ್ ಶೆಟ್ಟಿ, ಶ್ರೀ ಉಮಾನಾಥ್ ಶೆಟ್ಟಿ, ಇವರೆಲ್ಲರೂ ನಮ್ಮ ಕಾರ್ಯಕ್ರಮಕ್ಕೆ ಮೆರಗು ನೀಡಿದಂತಹ ಪ್ರಾಯೋಜಕರು.




ಈ ಅನ್ವೇಷಣೆ ಕಾರ್ಯಕ್ರಮಕ್ಕೆ ಬೇರೆ ಬೇರೆ ಊರುಗಳಿಂದ ವಧೂ ವರರು ಹಾಗೂ ಪೋಷಕರು ಆಗಮಿಸಿದ್ದರು. ಸರಿ ಸುಮಾರು 127 ವಧುಗಳ ನೋಂದಾವಣೆ, 62 ವರರ ನೋಂದಾವಣೆ ಆಗಿದ್ದು ಹಾಗೂ ಹಲವು ಪೋಷಕರು ಮತ್ತು ವಧೂ–ವರರು ಪರಸ್ಪರ ಮಾತನಾಡಿಕೊಂಡು ತಮ್ಮ ತಮ್ಮ ವಿವರಗಳನ್ನು ಪರಸ್ಪರರಿಗೆ ನೀಡಿದರು. ಇದು ನಮ್ಮ ಕಾರ್ಯಕ್ರಮದ ಬಹಳ ದೊಡ್ಡ ಯಶಸ್ಸು ಅನಿಸಿತ್ತು.

50 ವರ್ಷ ಸಂಸಾರಿಕ ಜೀವನ ನಡೆಸಿದ ದಂಪತಿಗಳು ಬಹಳ ಸಂತೋಷವಾಗಿ ಮಾತನಾಡಿ ಕಷ್ಟ–ಸುಖಗಳನ್ನು ಬೇವು–ಬೆಲ್ಲದಂತೆ ಜೀವನದಲ್ಲಿ ಸವಿದು, ಎಷ್ಟೇ ಕಷ್ಟಗಳು ಬಂದರೂ ಸಂಸಾರದ ದೋಣಿಯನ್ನು ಮುಂದುವರೆಸಿಕೊಂಡು ಹೋಗಬೇಕೆಂದು ಇಂದಿನ ಯುವ ಪೀಳಿಗೆಗೆ ಕಿವಿ ಮಾತು ಹೇಳಿದರು. ಸಭಾಂಗಣದಲ್ಲಿ ನಿರ್ಮಿಸಿದ ಫೋಟೋಗ್ರಫಿ ಸ್ಟುಡಿಯೋ ಅಂತೂ ಎಲ್ಲರನ್ನು ಕೈಬೀಸಿ ಕರೆಯುತ್ತಿತ್ತು. ಇಂತಹ ಒಳ್ಳೆಯ ಅನ್ವೇಷಣೆ ಕಾರ್ಯಕ್ರಮ ಸದಾ ಸಮಾಜ ಸೇವೆ ನಮ್ಮ ಗುರಿ ಎಂದು ಚೇರ್‌ಪರ್ಸನ್‌ರಾದ ಶ್ರೀಮತಿ ತಾರಾಮಣಿ ಹೆಗ್ಡೆಯವರು ಹಾಗೂ ಸಮಿತಿಯ ಸದಸ್ಯರು ಹಾಗೂ ಸಲಹೆಗಾರರೆಲ್ಲರ ಒಕ್ಕೊರಳಿನ ಮಾತಾಗಿತ್ತು.

**ಸುಧಾಕರ ಶೆಟ್ಟಿ**
ಸಂಚಾಲಕರು, ವಿವಾಹ ವೇದಿಕೆ ಸಮಿತಿ

**ತಾರಾಮಣಿ ಹೆಗ್ಡೆ**
ಚೇರ್‌ಪರ್ಸನ್, ವಿವಾಹ ವೇದಿಕೆ ಸಮಿತಿ

# ಬಂಟರ ಸಂಘ, ಬೆಂಗಳೂರು

## ಸಮಾಜ ಸೇವಾ ಸಮಿತಿ ಮತ್ತು ಸೇವಾದಳ –2018–20






ಶ್ರೀ ಎಂ. ಬಿ. ಉಮೇಶ್ ಶೆಟ್ಟಿಯವರು ಚೇರ್‌ಪರ್ಸನ್‌ರಾಗಿ ಹಾಗೂ ಶ್ರೀ ಅಜಿತ್ ಶೆಟ್ಟಿ ಉಳ್ತೂರು ಇವರು ಸಂಚಾಲಕರಾಗಿ ಸಮಿತಿಯು ಕಾರ್ಯನಿರ್ವಹಿಸುತ್ತಿದ್ದು, ಜೀವನಕ್ಕಾಗಿ ಕಾಮಧೇನು ಯೋಜನೆಯಡಿ ಹಲವಾರು ಹಳ್ಳಿಗಳಲ್ಲಿ ಅರ್ಹ ಫಲಾನುಭವಿಗಳಿಗೆ ಸಹಾಯಧನ ವಿತರಿಸಲಾಯಿತು. ಈ ಯೋಜನೆಯಡಿಯಲ್ಲಿ 18 ಕುಟುಂಬಗಳಿಗೆ ಸಹಾಯಧನ ನೀಡಲಾಯಿತು.

2018 ಜುಲೈನಲ್ಲಿ ಮಹಾಮಳೆಗೆ ಕೊಡಗು ಮತ್ತು ಮಡಿಕೇರಿಯ ಬಹುಭಾಗ ತತ್ತರಿಸಿ, ಅಲ್ಲಿನ ಬಂಟ ಕುಟುಂಬಗಳು ತೊಂದರೆಗೊಳಗಾದ 20 ಪಂಚಾಯತ್‌ಗಳ ವ್ಯಾಪ್ತಿಗೆ ಖುದ್ದಾಗಿ ಭೇಟಿ ನೀಡಿ ಅವರ ಸಮಸ್ಯೆಗಳನ್ನು ಆಲಿಸಿ, 150 ಕ್ಕೂ ಅಧಿಕ ಕುಟುಂಬಕ್ಕೆ ಬಟ್ಟೆ, ಸಾಕಷ್ಟು ಆಹಾರ ಸಾಮಾಗ್ರಿಗಳು, ಹೊದಿಕೆಗಳು ಇನ್ನಿತರ ಅಗತ್ಯ ವಸ್ತುಗಳನ್ನು ನೀಡಿ ಸಾಂತ್ವನ ಹೇಳಲಾಯಿತು. ಸಂಘದ ವತಿಯಿಂದ 9 ಕುಟುಂಬಗಳಿಗೆ ಧನ ಸಹಾಯದ ನೆರವನ್ನು ನೀಡಲಾಯಿತು.

ಬಂಟ ಆರೋಗ್ಯ ಯೋಜನೆ – ಇದರನ್ವಯ ಬೆಂಗಳೂರಿನ 19 ಪ್ರತಿಷ್ಠಿತ ಆಸ್ಪತ್ರೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಸಮಾಜದ ಅರ್ಹರಿಗೆ ಕೇಂದ್ರ ಸರಕಾರದ ವೈದ್ಯಕೀಯ ದರಪಟ್ಟಿಯಂತೆ (CGHS) ಎಲ್ಲಾರೀತಿಯ ವೈದ್ಯಕೀಯ ಚಿಕಿತ್ಸೆಗಳು ದೊರೆಯುತ್ತಿವೆ. ಇಲ್ಲಿಯವರೆಗೆ 50 ಅರ್ಹ ಬಂಟರಿಗೆ ವೈದ್ಯಕೀಯ ನೆರವನ್ನೂ ಹಾಗೂ ಯಶಸ್ವಿ ಶಸ್ತ್ರಚಿಕಿತ್ಸೆಯನ್ನು ನಡೆಸಲಾಗಿದೆ. ಇದರಲ್ಲಿ ಸುಮಾರು 25 ಕ್ಕೂ ಅಧಿಕ ಕ್ಯಾನ್ಸರ್ ರೋಗಿಗಳಿಗೆ ಉಚಿತ ಶಸ್ತ್ರಚಿಕಿತ್ಸೆ, ರೇಡಿಯೋ ಥೆರಫಿ ಚಿಕಿತ್ಸೆ ಕೊಡಿಸಲಾಯಿತು.

ಸೇವಾ ಚೇತನದಲ್ಲಿ ಕಿದ್ವಾಯಿ ಕ್ಯಾನ್ಸರ್‌ಆಸ್ಪತ್ರೆ, ಮಣಿಪಾಲ ಆಸ್ಪತ್ರೆ ಬೆಂಗಳೂರು, ಬೆಂಗಳೂರು ಕ್ಯಾನ್ಸರ್ ಆಸ್ಪತ್ರೆ, ಸ್ಪೈನ್‌ಕೇರ್ ಆಸ್ಪತ್ರೆ, SSNMC ಆಸ್ಪತ್ರೆ, ಕರ್ನಾಟಕ ಕ್ಯಾನ್ಸರ್ ಆಸ್ಪತ್ರೆ, ಎಸೆನ್ಷಿಯಲ್ ಆಸ್ಪತ್ರೆ, ಪ್ರೀಮಿಯರ್ ಸಂಜೀವಿನಿ ಆಸ್ಪತ್ರೆ ಸೇರಿದಂತೆ ವಿವಿದ ಆಸ್ಪತ್ರೆಗಳ ಸಹಯೋಗದೊಂದಿಗೆ ನಡೆದ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರದ ಪ್ರಯೋಜನ ಪಡೆದವರು 2100 ಕ್ಕೂ ಅಧಿಕ ಮಂದಿ.


ಮಾರ್ಚ್ 24, 2019ರಂದು ನಡೆದ ರಕ್ತದಾನ ಶಿಬಿರದಲ್ಲಿ ಬೆಂಗಳೂರಿನ ರಾಷ್ಟ್ರೋತ್ಥಾನ ಸಂಸ್ಥೆಯ ರಕ್ತನಿಧಿಗೆ 251 ಯುನಿಟ್ ರಕ್ತ ನೀಡಲಾಗಿದೆ. ಇನ್ನೀತರ ತುರ್ತು ಸಂದರ್ಭಗಳಲ್ಲಿ 50ಕ್ಕೂ ಹೆಚ್ಚು ಭಾರಿ ನಮ್ಮ ಸಮಿತಿಯ ಸದಸ್ಯರು ರಕ್ತದಾನ ಮಾಡಿರುತ್ತಾರೆ.

ನಮ್ಮ ಸಂಘದ ಸದಸ್ಯರಿಗೆ ತಾರಸಿ ಗಾರ್ಡನ್ ಮಾಹಿತಿ ಮತ್ತು ಯೋಜನಾ ಕಾರ್ಯಗಾರ ನಡೆಸಲಾಗಿದೆ. ನಮ್ಮ





ಸಂಘದ ಆಡಳಿತ ಕಛೇರಿಯ ತಾರಸಿಯ ಮೇಲೆ ಸುಸಜ್ಜಿತ ತೋಟದ ವ್ಯವಸ್ಥೆ ಮಾಡಲಾಗಿದೆ. ಇದರಲ್ಲಿ ತರಕಾರಿ ಗಿಡಗಳು, ಔಷದೀಯ ಸಸ್ಯಗಳು, ಹೂವಿನ ಸಸ್ಯಗಳು ಸೇರಿದಂತೆ ಹಲವಾರು ಗಿಡಗಳನ್ನು ಬೆಳೆಯಲಾಗಿದೆ. ಪ್ರಥಮ ಬೆಳೆಯ ಕತಾವು ಮಾಡಲಾಗಿದ್ದು, ಬೆಳೆದ ತರಕಾರಿಗಳನ್ನು ಮಹಿಳಾ ಹಾಸ್ಟೆಲ್‌ಗೆ ನೀಡಲಾಗಿದೆ. ತೋಟದಲ್ಲಿ ಬೆಳೆದ ಹೂವುಗಳನ್ನು ಕಛೇರಿಯ ನಿತ್ಯದ ಪೂಜೆಗೆ ಉಪಯೋಗಿಸಲಾಗುತ್ತಿದೆ.






ದಿನಾಂಕ 23.03.2019 ರಿಂದ 31.03.2019ರವರೆಗೆ ಸುಜೋಕ್ ಮತ್ತು ಅಕ್ಯುಪ್ರೇಶರ್ ತೆರಪಿಯನ್ನು ಸಂಘದ ಆವರಣದಲ್ಲಿ ನಡೆಸಲಾಯಿತು. ಸುಮಾರು 350 ಕ್ಕೂ ಅಧಿಕ ಜನರು ಇದರ ಪ್ರಯೋಜನವನ್ನು ಪಡೆದುಕೊಂಡರು.

24.03.2019ರ ಸೇವಾ ಚೇತನ ಕಾರ್ಯಕ್ರಮದಲ್ಲಿ ಆಯುಷ್ಮಾನ್ ಭಾರತ್ ಮತ್ತು ಆರೋಗ್ಯ ಕರ್ನಾಟಕ ಅಡಿಯಲ್ಲಿ ಚಿಕಿತ್ಸಾ ಸೌಲಭ್ಯಗಳು, ಇ.ಎಸ್.ಐ. ವಿಮಾ ಪದ್ಧತಿ ಮತ್ತು ಅದರ ಸಾಧ್ಯತೆ ಬಾಧ್ಯತೆಗಳ ಕುರಿತಂತೆ, ಬ್ಯಾಂಕಿಂಗ್ ಕ್ಷೇತ್ರಗಳಲ್ಲಿನ ಅವಕಾಶಗಳು, ಸಾಲ ಸೌಲಭ್ಯಗಳ ಕುರಿತಂತೆ ಮಾಹಿತಿ ಕಾರ್ಯಾಗಾರವನ್ನು ಏರ್ಪಡಿಸಲಾಯಿತು. ಸುಮಾರು 500ಕ್ಕೂ ಅಧಿಕ ಮಂದಿ ಇದರ ಪ್ರಯೋಜನವನ್ನು ಪಡೆದರು.

UIDAI ಸಹಯೋಗದೊಂದಿಗೆ ನಡೆದ ಆಧಾರ್ ನೊಂದಾವಣಿ ಮತ್ತು ತಿದ್ದುಪಡಿ ಕಾರ್ಯಕ್ರಮದಲ್ಲಿ 350ಕ್ಕೂ ಅಧಿಕ ಆಧಾರ್ ನೋಂದಾವಣಿ ಮತ್ತು ತಿದ್ದುಪಡಿ ಮಾಡಿಕೊಡಲಾಯಿತು.

ಕರ್ನಾಟಕ ಸರಕಾರದ ಸಾಮಾನ್ಯ ಆಡಳಿತ ಸೇವಾ ಕೇಂದ್ರ ಮತ್ತು ಸೇವಾ ಸಿಂಧು ಇಲಾಖಾ ಸಹಯೋಗದೊಂದಿಗೆ 1400 ಕ್ಕೂ ಮಿಕ್ಕಿ ಸಮಾಜ ಬಾಂಧವರು ಮತ್ತು ಸಾರ್ವಜನಿಕರಿಗೆ ಹಿರಿಯ ನಾಗರಿಕರ ಚೀಟಿ, ಆರೋಗ್ಯಕಾರ್ಡ್, ಬೇಕರಿ ಮತ್ತು ಆಹಾರ ಪರವಾನಿಗೆ ಸೇರಿದಂತೆ ಇನ್ನಿತರ ಪರವಾನಗಿಗಳನ್ನು ನೀಡಲಾಯಿತು.

ಸಮಾಜ ಸೇವಾ ಸಮಿತಿ ಮತ್ತು ಬಂಟ್ಸ್ ಸೇವಾದಳ ವತಿಯಿಂದ ಸಹಾಯಹಸ್ತ ಎನ್ನುವ ವಿನೂತನ ಕಾರ್ಯಕ್ರಮವನ್ನು ಈ ಬಾರಿ ಆರಂಭಿಸಿದ್ದು ಅದರಂತೆ, ಕರಾವಳಿ ಭಾಗದ ಹಿಂದುಳಿದ ಪ್ರದೇಶಗಳಲ್ಲಿನ ಸರಕಾರಿ ಕನ್ನಡ ಮಾಧ್ಯಮ ಶಾಲೆಯ ಮಕ್ಕಳಿಗೆ ನೋಟ್ ಪುಸ್ತಕ, ಪೆನ್ನು, ಪೆನ್ಸಿಲ್‌ಕಿಟ್, ಕ್ರೀಡಾ ಸಾಮಾಗ್ರಿಗಳನ್ನು ವಿತರಿಸಲಾಯಿತು. ಉಡುಪಿ ಜಿಲ್ಲೆಯ 13 ಶಾಲೆಗಳ 1600ಕ್ಕೂ ಮಿಕ್ಕಿದ ವಿದ್ಯಾರ್ಥಿಗಳಿಗೆ ಒಂದು ವರ್ಷಕ್ಕಾಗುವಷ್ಟು ನೋಟ್ ಪುಸ್ತಕಗಳನ್ನು ಆ ಶಾಲೆಗಳಿಗೆ ತೆರಳಿ ವಿತರಿಸಲಾಯಿತು.

**ಬಂಟ್ಸ್ ಸೇವಾದಳ :** ಬೆಂಗಳೂರಿನ ವಿವಿಧ ಭಾಗಗಳಲ್ಲಿರುವ ಬಂಟರನ್ನು ಒಗ್ಗೂಡಿಸಲು ಹಾಗೂ ತುರ್ತು ಸಂದರ್ಭಗಳಲ್ಲಿ ಅವರಿಗೆ ನೆರವಾಗುವ ನಿಟ್ಟಿನಲ್ಲಿ ನೂತನ ಪರಿಕಲ್ಪನೆಯೊಂದಿಗೆ ಆರಂಭಿಸಿದ ಸೇವಾದಳದ ಚೇರ್‌ಪರ್ಸನ್‌ರಾಗಿ ಶ್ರೀ ಎಂ. ಬಿ. ಉಮೇಶ್ ಶೆಟ್ಟಿಯವರು ಹಾಗೂ ಶ್ರೀ ಭಾಸ್ಕರ ಶೆಟ್ಟಿ ಮತ್ತು ನಿರಂಜನ ಶೆಟ್ಟಿಯವರು ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ದಿನಾಂಕ 24.03.2019ರಂದು ಸಂಘದ ಆವರಣದಲ್ಲಿ ಆಯೋಜಿಸಿದ್ದ 'ಸೇವಾ ಚೇತನ' ಕಾರ್ಯಕ್ರಮದಂದು ಸೇವಾದಳದ ಧ್ವಜವನ್ನು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಸೇವಾದಳದ ಚೇರ್‌ಪರ್ಸನ್‌ರವರಿಗೆ ಹಸ್ತಾಂತರಿಸಿದರು.

ಸಂಘದ ಸದಸ್ಯರು ಮತ್ತು ಸಾರ್ವಜನಿಕರಿಂದ ಉಪಯುಕ್ತ ಬಳಕೆ ಯೋಗ್ಯ ಹಳೆಯ ಸೈಕಲ್, ಪುಸ್ತಕಗಳು, ಕಲಿಕಾ ಸಾಮಾಗ್ರಿ, ಕ್ರೀಡಾ ಸಾಮಾಗ್ರಿ ಸೇರಿದಂತೆ ಇನ್ನೂ ಹಲವು ಸಾಮಾಗ್ರಿಗಳನ್ನು ಸಂಗ್ರಹಿಸಿ ಅದರ ಅಗತ್ಯವಿರುವವರಿಗೆ ನೀಡಿದ್ದೇವೆ.





**ಅಜಿತ್ ಶೆಟ್ಟಿ ಉಳ್ತೂರು**
ಸಂಚಾಲಕರು, ಸಮಾಜ ಸೇವಾ ವಿಭಾಗ

**ಉಮೇಶ್ ಶೆಟ್ಟಿ ಎಂ. ಬಿ**
ಚೇರ್‌ಪರ್ಸನ್, ಸಮಾಜ ಸೇವಾ ವಿಭಾಗ

# ಬಂಟರ ಸಂಘ, ಬೆಂಗಳೂರು
## ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ

2018–20ನೇ ಸಾಲಿನ ರಂಗತರಬೇತಿ ಮತ್ತು ಯಕ್ಷಗಾನ ಸಮಿತಿಯ ಅಧ್ಯಕ್ಷರಾದ ಶ್ರೀ ಗುರುಪ್ರಸಾದ್ ಹೆಗ್ಡೆ ಮತ್ತು ಸಂಚಾಲಕರಾದ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಇವರ ಮುಂದಾಳತ್ವದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಡಲಾಯಿತು.



ತಾರೀಕು 13.09.2018ರಂದು ಗಣೇಶೋತ್ಸವದ ಪ್ರಯುಕ್ತ ಸಂಘದ ಸದಸ್ಯರಿಂದ 'ಲವ–ಕುಶ' ಯಕ್ಷಗಾನ ಪ್ರಸಂಗವು ಜರುಗಿತು. ತಾರೀಕು 31.03.2019ರಂದು ಯಕ್ಷತೋರಣ ಕಾರ್ಯಕ್ರಮದಲ್ಲಿ ಸಂಘದ ತರಬೇತಿ ಕೇಂದ್ರದ ವಿದ್ಯಾರ್ಥಿಗಳಿಂದ 'ರತಿ ಕಲ್ಯಾಣ', ಮಹಿಳಾ ಸದಸ್ಯೆಯರಿಂದ 'ವಿದ್ಯುನ್ಮತಿ ಕಲ್ಯಾಣ' ಹಾಗೂ ಹವ್ಯಾಸಿ ಸದಸ್ಯ ಕಲಾವಿದರಿಂದ 'ದೇವಿ ಮಹಾತ್ಮೆ' ಪ್ರಸಂಗವು ಅತ್ಯಂತ ಅದ್ದೂರಿಯಾಗಿ ನಡೆಯಿತು.




2.09.2019ರಂದು ಗಣೇಶೋತ್ಸವದ ಪ್ರಯುಕ್ತ ಸದಸ್ಯರು ಹಾಗೂ ಅತಿಥಿ ಕಲಾವಿದರ ಕೂಡುವಿಕೆಯಿಂದ 'ಶಮಂತಕೋಪಖ್ಯಾನ' ಪ್ರಸಂಗವು ಜರುಗಿತು.

ತಾರೀಕು 19.01.2020ರಂದು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ವಾರ್ಷಿಕೋತ್ಸವದ ಪ್ರಯುಕ್ತ ತರಬೇತಿ ಕೇಂದ್ರದ ವಿದ್ಯಾರ್ಥಿಗಳಿಂದ 'ಸೀತಾ ವಿಯೋಗ ಕುಶ–ಲವ, ಮಹಿಳೆಯರಿಂದ ಯಕ್ಷ ನೃತ್ಯ ರೂಪಕ ಮತ್ತು ಸದಸ್ಯರು ಹಾಗೂ ಅತಿಥಿ ಕಲಾವಿದರ ಕೂಡುವಿಕೆಯಿಂದ 'ಬಬ್ರುವಾಹನ ಕಾಳಗ' ಪ್ರಸಂಗಗಳು ಅತ್ಯಂತ ಸುಂದರವಾಗಿ ಮೂಡಿಬಂತು.



ಸಮಿತಿಯು ವತಿಯಿಂದ ವಿದ್ಯಾರ್ಥಿಗಳಿಗೆ ಮತ್ತು ಮಹಿಳೆಯರಿಗೆ ಯಕ್ಷಗಾನ ತರಬೇತಿಯು ನಿಯಮಿತವಾಗಿ ನಡೆಯುತ್ತಿದ್ದು 35ಕ್ಕೂ ಹೆಚ್ಚು ಮಂದಿ ತರಬೇತಿ ಪಡೆಯುತ್ತಿದ್ದಾರೆ. ಶ್ರೀಯುತ ಬೇಗಾರ್ ಶಿವಕುಮಾರ್ ಅವರು ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಸಂತೋಷ್ ಕುಮಾರ್ ಶೆಟ್ಟಿ**
ಸಂಚಾಲಕರು, ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ

**ಗುರುಪ್ರಸಾದ್ ಹೆಗ್ಡೆ**
ಅಧ್ಯಕ್ಷರು, ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ

# ಬಂಟರ ಸಂಘ ಬೆಂಗಳೂರು
# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ 2018-20

ಬಂಟ ಸಮಾಜದ ನಮ್ಮ ಮಕ್ಕಳಿಗೆ ಅತ್ಯುತ್ತಮ ಶಿಕ್ಷಣ ನೀಡಬೇಕೆಂಬ ದೃಷ್ಟಿಯಿಂದ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ನಮ್ಮ ಸಂಘ ಏರ್ಪಡಿಸಿ, ಅದರಿಂದ ಸಾವಿರಾರು ಜನರು ಫಲಾನುಭವಿಗಳಾಗಿದ್ದಾರೆ.



ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗುವ ನಿಟ್ಟಿನಲ್ಲಿ ಎಂಟನೇ ತರಗತಿಯಿಂದ ದ್ವಿತೀಯ ಪದವಿ ಪೂರ್ವ ತರಗತಿಯವರೆಗೆ 2018-19ರ ಸಾಲಿನಲ್ಲಿ ಶೃಂಗೇರಿ, ಬೆಳ್ತಂಗಡಿ, ಕಾಸರಗೋಡು, ಮುಲ್ಕಿ, ಬಾಳೆಹೊನ್ನುರು, ಸುಳ್ಯ, ಕೊಪ್ಪ, ಶಿರೂರು, ಬೈಂದೂರು ಹಾಗೂ ಹೆಬ್ರಿ ಸಂಘಗಳ ವ್ಯಾಪ್ತಿಯಲ್ಲಿ ರೂ.4,26,250/- ಹಾಗೂ 2019-20ರ ಸಾಲಿನಲ್ಲಿ ಸುರತ್ಕಲ್, ಶೃಂಗೇರಿ, ಗುರುಪುರ, ಸಾಲೆತ್ತೂರು, ಬೆಳ್ತಂಗಡಿ, ಮುಲ್ಕಿ, ಪುತ್ತೂರು, ಕಾಸರಗೋಡು, ಬಾಳೆಹೊನ್ನೂರು, ಹೆಬ್ರಿ, ಬ್ರಹ್ಮಾವರ, ಸುಳ್ಯ, ಬೈಂದೂರು ಸಂಘಗಳ ವ್ಯಾಪ್ತಿಯಲ್ಲಿ ರೂ.6,69,225/- ಉಚಿತ ವಿದ್ಯಾರ್ಥಿ ವೇತನವನ್ನು ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಸ್ಥಳೀಯ ಸಂಘಗಳ ಸಹಯೋಗದಿಂದ ನೀಡಿದೆ.

ತೀರಾ ಆರ್ಥಿಕ ಸಂಕಷ್ಟದಲ್ಲಿರುವ ಕುಟುಂಬದ ವಿದ್ಯಾರ್ಥಿಗಳಿಗೆ ನೆರವಾಗುವ ಉದ್ದೇಶದಿಂದ 2018-19ರ ಸಾಲಿನಲ್ಲಿ ರೂ.1,40,000/- ಹಾಗೂ 2019-20ರ ಸಾಲಿನಲ್ಲಿ ರೂ. 70,000/- ಶೈಕ್ಷಣಿಕ ಧನ ಸಹಾಯವನ್ನು ನೀಡಲಾಗಿದೆ.

ಪದವಿ, ಸ್ನಾತಕೋತ್ತರ ಪದವಿ, ಇಂಜಿನಿಯರಿಂಗ್, ಮೆಡಿಕಲ್ ಹಾಗೂ ಇತರ ವೃತ್ತಿ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗೆ 2018-19 ರ ಸಾಲಿನಲ್ಲಿ 192 ವಿದ್ಯಾರ್ಥಿಗಳಿಗೆ 21,90,000/- ಹಾಗೂ 2019-20ರ ಸಾಲಿನಲ್ಲಿ 181 ವಿದ್ಯಾರ್ಥಿಗಳಿಗೆ 22,95,000/- ರೂ.ಗಳ ಬಡ್ಡಿರಹಿತ ಸಾಲ ರೂಪದ ವಿದ್ಯಾರ್ಥಿ ವೇತನ ನೀಡಿದೆ.



ಸ್ಥಾಪಕ ದಿನಾಚರಣೆಯ ಸಮಾರಂಭದಲ್ಲಿ 2018–19ರ ಸಾಲಿನಲ್ಲಿ ಸಂಘದ ದತ್ತಿನಿಧಿ ಸ್ಮಾರಕ ಪ್ರಶಸ್ತಿಗಳನ್ನು ವಿವಿಧ ಕ್ಷೇತ್ರದಲ್ಲಿ ವಿಶೇಷ ಸಾಧನೆಗೈದ 30 ವಿದ್ಯಾರ್ಥಿಗಳಿಗೆ ಮತ್ತು 12 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಾಗೂ 2019–20ರ ಸಾಲಿನಲ್ಲಿ ವಿಶೇಷ ಸಾಧನೆಗೈದ 35 ವಿದ್ಯಾರ್ಥಿಗಳಿಗೆ ಮತ್ತು 25 ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಫಲಕ ಮತ್ತು ನಗದು ಬಹುಮಾನ ನೀಡಿ ಗೌರವಿಸಲಾಯಿತು. ಶ್ರೀಮತಿ ಶಕೀಲಾ ಎಸ್. ಶೆಟ್ಟಿಯವರು ಕೊಡಮಾಡಿದ 5 ಲಕ್ಷ ರೂ.ಗಳಿಂದ 'ದಿ। ಸೂಡ ಸಂಜೀವ ಶೆಟ್ಟಿ ಹಾಗೂ ಸರೋಜಿನಿ ಸಂಜೀವ ಶೆಟ್ಟಿ ಸ್ಮಾರಕ' ನಗದು ಪ್ರಶಸ್ತಿ ಸ್ಥಾಪಿಸಿ ಅದರಿಂದ ಸಂಗ್ರಹವಾಗುವ ಬಡ್ಡಿಯ ಹಣದಿಂದ ಪಿಯುಸಿ, ಪದವಿ ಅಥವಾ ಇನ್ನಾವುದೇ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ 3 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ ನೀಡಲಾಗಿತ್ತಿದೆ. ಹಾಗೂ ಶ್ರೀಮತಿ ವಿಜಯಲಕ್ಷ್ಮೀ ಶೆಟ್ಟಿಯವರು ಕೊಡಮಾಡಿದ 3 ಲಕ್ಷ ರೂ.ಗಳಿಂದ 'ದಿ। ಕೆ.ಎಸ್. ಹರ್ಷವರ್ಧನ್ ಶೆಟ್ಟಿ ಸ್ಮಾರಕ' ನಗದು ಪ್ರಶಸ್ತಿ, ಅದರಿಂದ ಸಂಗ್ರಹವಾಗುವ ಬಡ್ಡಿಯ ಹಣದಿಂದ ಪಿಯುಸಿ, ಪದವಿ ಅಥವಾ ಇನ್ನಾವುದೇ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ, ತಂದೆಯನ್ನು ಕಳೆದುಕೊಂಡ 2 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ ನೀಡಲಾಗುತ್ತಿದೆ.





ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಪೋಷಕರ ಕನಸಿಗೆ ಧಕ್ಕೆಯಾಗಬಾರದು, ಶಾಲಾ ಶುಲ್ಕಗಳಿಂದ ಪೋಷಕರು ಕಷ್ಟ ಅನುಭವಿಸುವಂತಾಗಬಾರದು ಎನ್ನುವ ಉದ್ದೇಶದೊಂದಿಗೆ ಜಾರಿಗೆ ತಂದ ವಿದ್ಯಾದೀವಿಗೆ ಯೋಜನೆಯಡಿಯಲ್ಲಿ ಸುಮಾರು 182 ಮಕ್ಕಳಿಗೆ 15,35,000/– ರೂ. ಸಹಾಯಧನ ನೀಡಲಾಗಿದೆ. ಭವಿಷ್ಯದ ದೃಷ್ಟಿಯಿಂದ ಈ ಯೋಜನೆ ಅತ್ಯಂತ ಮಹತ್ವದಾಗಿದ್ದು ಉತ್ತಮ ಶಿಕ್ಷಣದಿಂದ ನಮ್ಮ ಸಮಾಜದ ಮಕ್ಕಳು ವಂಚಿತರಾಗಬಾರದು ಎನ್ನುವ ನಮ್ಮ ಹಾರೈಕೆಗೆ ಮತ್ತಷ್ಟು ಬಲ ನೀಡಿದೆ.

**ಉದಯ ಕುಮಾರ್ ಶೆಟ್ಟಿ**
ಸಂಚಾಲಕರು, ವಿದ್ಯಾರ್ಥಿವೇತನ ಸಮಿತಿ

**ಪ್ರವೀಣ್‌ಚಂದ್ರ ಶೆಟ್ಟಿ**
ಚೇರ್‌ಪರ್ಸನ್, ವಿದ್ಯಾರ್ಥಿವೇತನ ಸಮಿತಿ

# ಬಂಟರ ಸಂಘ ಬೆಂಗಳೂರು – ಕ್ರೀಡಾ ಸಮಿತಿ ವರದಿ 2018–20

ಬಂಟರ ಸಂಘದ ಕ್ರೀಡಾ ಸಮಿತಿಯು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಕೂಟದ ಪ್ರಥಮ ವರ್ಷದ ಕ್ರೀಡಾ ಚಟುವಟಿಕೆಗಳ ಉದ್ಘಾಟನೆಯನ್ನು 28.10.2018ರ ಭಾನುವಾರದಂದು ಹಾಗೂ ದ್ವಿತೀಯ ವರ್ಷದ ಉದ್ಘಾಟನೆಯನ್ನು 20.10.2019 ರಂದು ಬೆಳಿಗ್ಗೆ ಸಾಯಿ ಕ್ರೀಡಾಂಗಣದಲ್ಲಿ ನಡೆಸಲಾಯಿತು. ಶ್ರೀ ವರಸಿದ್ಧಿ ವಿನಾಯಕನಿಗೆ ಪೂಜೆ ಸಲ್ಲಿಸಿ ಕ್ರೀಡಾದೀಪ ಬೆಳಗಿಸಿ ನೆರೆದಿರುವ ಸದಸ್ಯರೊಂದಿಗೆ ಮುಖ್ಯ ಅತಿಥಿಗಳು, ಸಂಘದ ಪದಾಧಿಕಾರಿಗಳು ಹಾಗೂ ಕ್ರೀಡಾ ಸಮಿತಿಯ ಸದಸ್ಯರನ್ನೊಳಗೊಂಡು ಕ್ರೀಡಾ ಜ್ಯೋತಿಯೊಂದಿಗೆ ಕ್ರೀಡಾ ಬಾವುಟ, ಬೈಕ್ ರ್‍ಯಾಲಿ, ಚೆಂಡೆ ಮೆರವಣಿಗೆಯೊಂದಿಗೆ ಸಾಯಿ ಕ್ರೀಡಾಂಗಣದಲ್ಲಿ ವಿದ್ಯುಕ್ತವಾಗಿ ಚಾಲನೆಗೊಂಡಿತು.

2018–19ನೇ ಸಾಲಿನ ಕ್ರೀಡಾ ಕೂಟದ ಉದ್ಘಾಟಕರು ಹಾಗೂ ಮುಖ್ಯ ಅತಿಥಿಯಾಗಿ ಕರ್ನಾಟಕ ರಾಜ್ಯ ಅಥ್ಲೆಟಿಕ್ ಅಸೋಸಿಯೇಶನ್‌ನ ಅಂದಿನ ಅಧ್ಯಕ್ಷರಾದ ಶ್ರೀ ಎನ್. ಮುತ್ತಪ್ಪ ರೈಯವರು, ಅಂತರ್‌ರಾಷ್ಟ್ರೀಯ ಪ್ಯಾರಲಿಂಪಿಕ್ ಈಜುಗಾರ ಶ್ರೀ ಕೆ. ಎಸ್ ವಿಶ್ವಾಸ್‌ರವರು, 2019–20ನೇ ಸಾಲಿನ ಕ್ರೀಡಾಕೂಟದ ಉದ್ಘಾಟಕರಾಗಿ ಅಂತರಾಷ್ಟ್ರೀಯ ಪ್ಯಾರಲಿಂಪಿಕ್ ಎತ್ತರ ಜಿಗಿತದಲ್ಲಿ ರಜತ ಪದಕ, ರಾಜ್ಯೋತ್ಸವ, ಏಕಲವ್ಯ, ರಾಷ್ಟ್ರ ಪ್ರಶಸ್ತಿಗಳಾದ ಅರ್ಜುನ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಶ್ರೀ ಗಿರೀಶ ಹೆಚ್.ಎನ್‌ರವರು ಹಾಗೂ ಮುಖ್ಯ ಅತಿಥಿಗಳಾಗಿ ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಉಪಾಧ್ಯಕ್ಷರಾದ ಶ್ರೀ ವಿಶ್ವನಾಥ ಶೆಟ್ಟಿ ಕರ್ನಿರೆ, ಹಾಗೂ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಹಾಗೂ ಸಂಘದ ಕ್ರೀಡಾಸಕ್ತ ಸದಸ್ಯರನ್ನೊಳಗೊಂಡು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಸ್ಕೌಟ್ಸ್ ಮತ್ತು ಗೈಡ್ಸ್, ಬ್ಯಾಂಡ್ ವಿದ್ಯಾರ್ಥಿಗಳು ಹಾಗೂ ಕ್ರೀಡಾ ಸಮಿತಿಯ ಸದಸ್ಯರ ಪಥಸಂಚಲನದೊಂದಿಗೆ ಅತಿಥಿಗಳಿಗೆ ಗೌರವ ಸಲ್ಲಿಸಲಾಯಿತು. ವಿಜೇತರಿಗೆ ವಿಜಯ ವೇದಿಕೆಯಲ್ಲಿ ಪದಕ ಪ್ರದಾನ ಮಾಡಲಾಯಿತು. ಕಾರ್ಯಕ್ರಮವು ಶಿಸ್ತುಬದ್ಧವಾಗಿ ನಡೆದು ಸಂಪೂರ್ಣ ಯಶಸ್ವಿಯಾಯಿತು.





ಹಾಗೆಯೇ 2018ನೇ ಸಾಲಿನ ಚೆಸ್, ಕೇರಂ ಟೆನ್ನಿಕ್ವಾಯಟ್‌ನ್ನು ನವೆಂಬರ್ 4ರಂದು, ನವೆಂಬರ್ 18ರಂದು ಶಟಲ್ ಬ್ಯಾಡ್ಮಿಂಟನ್ ಪಂದ್ಯಾಟವನ್ನು ಬಂಟರ ಸಂಘದ ಆವರಣ ಮತ್ತು ಕೆನರಾ ಯೂನಿಯನ್ ಮಲ್ಲೇಶ್ವರಂನಲ್ಲಿ,

2019ನೇ ಸಾಲಿನ ಶಟಲ್ ಬ್ಯಾಡ್ಮಿಂಟನ್ ಪಂದ್ಯಾಟವನ್ನು ನವೆಂಬರ್ 10ರಂದು ಲೆಟ್ಸ್ ಪ್ಲೇ ನಾಗರಭಾವಿಯಲ್ಲಿ, ಹಾಗೆಯೇ ಚೆಸ್, ಕೇರಂ ಟೆನ್ನಿಕ್ವಾಯಟ್‌ನ್ನು ಸಂಘದ ಆವರಣದಲ್ಲಿ ನವೆಂಬರ್ 17ರಂದು ಆಯೋಜಿಸಲಾಗಿತ್ತು.

2018–19 ನೇ ಸಾಲಿನ ಕ್ರಿಕೆಟ್ ಹಾಗೂ ತ್ರೋಬಾಲ್ ಪಂದ್ಯಾವಳಿಯನ್ನು ಡಿಸೆಂಬರ್ 01 ಮತ್ತು 02ರಂದು ಬಿ.ಇ. ಎಲ್. ಜಾಲಹಳ್ಳಿ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾಗಿತ್ತು. 31 ತಂಡಗಳು ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು, ನಾಕ್‌ಔಟ್ ಮಾದರಿಯ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. ಪ್ರತಿಯೊಂದು ಪಂದ್ಯಕ್ಕೂ ಅತ್ಯುತ್ತಮ ಪ್ರದರ್ಶನ ನೀಡಿದವರಿಗೆ ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸರಣಿಯ ಬೆಸ್ಟ್ ಬೌಲರ್ ಮತ್ತು ಬೆಸ್ಟ್ ಬ್ಯಾಟ್ಸ್‌ಮೆನ್‌ಗಳಿಗೂ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪಂದ್ಯಾವಳಿಯಲ್ಲಿ ಹೊಯ್ ರಾಕಾರ್ಸ್ ತಂಡವು ತೃತೀಯ, ಯು.ಹೆಚ್.ಎಸ್. ತಂಡ ದ್ವಿತೀಯ ಹಾಗೂ ಎಸ್.ಆರ್.ಡಿ. ಏಸ್‌ಬಾಂಡ್ ತಂಡವು ಪ್ರಥಮ ಸ್ಥಾನವನ್ನು ಪಡೆದರು. ಹಾಗೆಯೇ ತ್ರೋಬಾಲ್‌ನಲ್ಲಿ 7 ತಂಡಗಳು ಭಾಗವಹಿಸಿದ್ದು, ಮೂಲ್ಕಿ ಸುಂದರರಾಮ್ ಶೆಟ್ಟಿ ನಗರ, ಬಸವೇಶ್ವರ ನಗರ ಹಾಗೂ ಕರಾವಳಿ ತಂಡಗಳು ಅನುಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನವನ್ನು ಪಡೆದುಕೊಂಡವು.



2019–20ನೇ ಸಾಲಿನ ತ್ರೋಬಾಲ್ ಪಂದ್ಯಾಟವನ್ನು ಡಿಸೆಂಬರ್ 8ರಂದು ಬಂಟರ ಸಂಘದ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ಪಂದ್ಯಾವಳಿಯಲ್ಲಿ ಮೂಲ್ಕಿ ಸುಂದರರಾಮ್ ಶೆಟ್ಟಿ ನಗರ ಪ್ರಥಮ ಸ್ಥಾನವನ್ನು, ಕಡಲು ತಂಡವು ದ್ವಿತೀಯ ಸ್ಥಾನವನ್ನು ಪಡೆಯಿತು. ಡಿಸೆಂಬರ್ 28 ಮತ್ತು 29ರಂದು ಕ್ರಿಕೆಟ್ ಪಂದ್ಯಾವಳಿಯನ್ನು ಹೆಚ್.ಎಂ.ಟಿ. ಜಾಲಹಳ್ಳಿ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾಗಿತ್ತು. 29 ತಂಡಗಳು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು, ನಾಕ್‌ಔಟ್ ಮಾದರಿಯ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು. ನಂತರ ಕ್ವಾಟರ್ ಫೈನಲ್, ಸೆಮಿ ಫೈನಲ್, ಫೈನಲ್ ಪಂದ್ಯಾವಳಿಯೊಂದಿಗೆ ಕ್ರಿಕೆಟ್ ಮುಕ್ತಾಯಗೊಂಡಿತು. ಅತ್ಯುತ್ತಮ ಪ್ರದರ್ಶನ ನೀಡಿದ ಯು.ಹೆಚ್.ಎಸ್. ತಂಡದ ನಾಯಕ ರವಿಯವರಿಗೆ "ಸರಣಿ ಶ್ರೇಷ್ಠ" ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು. ಸರಣಿಯ ಬೆಸ್ಟ್ ಬೌಲರ್ ಮತ್ತು ಬೆಸ್ಟ್ ಬ್ಯಾಟ್ಸ್‌ಮೆನ್‌ಗಳಿಗೂ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಪಂದ್ಯಾವಳಿಯಲ್ಲಿ ಯು.ಹೆಚ್.ಎಸ್. ತಂಡ ಪ್ರಥಮ ಹಾಗೂ ಗೂಗ್ಲಿ ತಂಡವು ದ್ವಿತೀಯ ಸ್ಥಾನವನ್ನು ಪಡೆದರು.

ಕ್ರೀಡಾ ಸಮಿತಿಯು 2019–20ನೇ ಸಾಲಿನ ಕ್ರೀಡಾ ಕೂಟದ ಪ್ರಯುಕ್ತ ವಾಲಿಬಾಲ್ ಪಂದ್ಯಾವಳಿಯನ್ನು ದಿನಾಂಕ 17.11.2019ರಂದು ಸಂಘದ ಆವರಣದಲ್ಲಿ ಅತ್ಯಂತ ಯಶಸ್ವಿಯಾಗಿ ಆಯೋಜಿಸಲಾಯಿತು. ವಾಲಿಬಾಲ್ ಪಂದ್ಯಾವಳಿಗೆ ಮುಖ್ಯ ಅತಿಥಿಯಾಗಿ ಬೆಂಗಳೂರು ಗ್ರಾಮೀಣ ಕೋ–ಅಪರೇಟಿವ್ ಸೊಸೈಟಿಯ ಡೆಪ್ಯುಟಿ ರಿಜಿಸ್ಟ್ರಾರ್‌ರವರಾದ ಶ್ರೀಮತಿ ಯಶಸ್ವಿನಿ ಶೆಟ್ಟಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿ ಆಟಗಾರರಿಗೆ ಶುಭ ಹಾರೈಸಿದರು. ಪಂದ್ಯಾವಳಿಯಲ್ಲಿ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ವಾಲಿಬಾಲ್ ಪಟುಗಳು ಭಾಗವಹಿಸಿದ್ದರು. ಗೂಗ್ಲಿ ತಂಡವು ಮೈತ್ರಿ ತಂಡವನ್ನು ಮಣಿಸಿ ವಿಜೇತ ತಂಡವಾಗಿ ಹೊರಹೊಮ್ಮಿತು. ಮೈತ್ರಿ ತಂಡವು ರನ್ನರ್ಸ್ ಅಪ್ ಪ್ರಶಸ್ತಿ ಪಡೆಯಿತು.





2018–20ರ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ನಡೆದ ಸಮಾರಂಭದಂದು ಕ್ರೀಡಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು. ರಾಷ್ಟ್ರೀಯ ಹಾಗೂ ಅಂತರಾಷ್ಟೀಯ ಮಟ್ಟದ 17 ಜನ ಕ್ರೀಡಾ ಸಾಧಕರಿಗೆ ನೆನಪಿನ ಕಾಣಿಕೆಯೊಂದಿಗೆ ನಗದು ಬಹುಮಾನವನ್ನು ನೀಡಿ ಪ್ರೋತ್ಸಾಹಿಸಲಾಯಿತು. ಹಾಗೂ ಕ್ರೀಡಾ ಕ್ಷೇತ್ರದಲ್ಲಿನ ಸಾಧನೆಗಾಗಿ ಸಂಘದ ಹಿರಿಯ ಸದಸ್ಯೆ ಶ್ರೀಮತಿ ಮುಕ್ತಾ ಯು. ಶೆಟ್ಟಿ ಹಾಗೂ ಪ್ಯಾರಾಲಿಂಪಿಕ್ ಆಟಗಾರ ಶ್ರೀ ವಿಶ್ವಾಸ್ ಕೆ. ಎಸ್ ಇವರುಗಳನ್ನು ಇದೇ ಸಂದರ್ಭದಲ್ಲಿ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.





ಕ್ರೀಡಾ ಸಮಿತಿಯು ಕ್ರೀಡಾ ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸುವುದರೊಂದಿಗೆ ನಿಗದಿಪಡಿಸಿದ ಮೊತ್ತದಲ್ಲಿ ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ಆಯೋಜಿಸಿ ಸ್ವಲ್ಪ ಮೊತ್ತವನ್ನು ಉಳಿತಾಯ ಮಾಡಿ ಸಂಘಕ್ಕೆ ನೆರವಾಯಿತು. ನಮ್ಮ ಎಲ್ಲಾ ಕ್ರೀಡಾ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರಿಗೆ, ಉಪಾಧ್ಯಕ್ಷರುಗಳಾದ ಶ್ರೀ ಭೋಜರಾಜ್ ಶೆಟ್ಟಿ ಕೊರ್ಗಿ, ಶ್ರೀಮತಿ ಅಮೃತಾ ಎಸ್. ಶೆಟ್ಟಿಯವರಿಗೆ, ಗೌರವ ಕಾರ್ಯದರ್ಶಿಯವರಾದ ಶ್ರೀ ಮಧುಕರ ಎಂ. ಶೆಟ್ಟಿಯವರಿಗೆ, ಜೊತೆ ಕಾರ್ಯದರ್ಶಿಯವರಾದ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರಿಗೆ, ಖಜಾಂಚಿಯವರಾದ ಶ್ರೀ ದೀಪಕ್ ಶೆಟ್ಟಿಯವರಿಗೆ, ಕಾರ್ಯಕಾರಿ ಸಮಿತಿ ಸದಸ್ಯರಿಗೆ, ಕ್ರೀಡಾ ಸಮಿತಿ ಸದಸ್ಯರಿಗೆ, ಸಂಘದ ಸದಸ್ಯರಿಗೆ, ದಾನಿಗಳಿಗೆ ತುಂಬುಹೃದಯದ ಧನ್ಯವಾದಗಳು.

**ರಂಜಿತ್ ಶೆಟ್ಟಿ**
ಸಂಚಾಲಕರು, ಕ್ರೀಡಾ ಸಮಿತಿ

**ರಾಧಾಕೃಷ್ಣ ಶೆಟ್ಟಿ**
ಚೇರ್‌ಮೆನ್, ಕ್ರೀಡಾ ಸಮಿತಿ

# ಬಂಟರ ಸಂಘ ಬೆಂಗಳೂರು
## ಯುವ ವಿಭಾಗ – ವರದಿ 2018–20

### ರಕ್ತದಾನ ಶಿಬಿರ:

ದಿನಾಂಕ 26.08.2018ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರು ಬಂಟರ ಸಂಘದಲ್ಲಿ ಆಯೋಜಿಸಿದ ರಕ್ತದಾನ ಶಿಬಿರವನ್ನು ಇ.ಎಸ್.ಐ. ವೈದ್ಯಕೀಯ ಮಹಾ ವಿದ್ಯಾಲಯ ರಾಜಾಜಿನಗರ ಬೆಂಗಳೂರಿನ ಉಪನ್ಯಾಸಕರಾದ ಡಾ. ವಿನಯ ಶೆಟ್ಟಿಯವರು ಉದ್ಘಾಟಿಸಿದರು. ರಕ್ತದಾನ ಶಿಬಿರದಲ್ಲಿ 83 ರಕ್ತದಾನಿಗಳು ಭಾಗವಹಿಸಿದ್ದರು. ಸಂಗ್ರಹಿಸಿದ ರಕ್ತವನ್ನು ಬಡ ರೋಗಿಗಳ ಉಪಯೋಗಕ್ಕಾಗಿ ರಾಜಾಜಿನಗರ ಇ.ಎಸ್.ಐ. ಆಸ್ಪತ್ರೆಗೆ ಹಸ್ತಾಂತರಿಸಲಾಯಿತು. ತದನಂತರ ರಕ್ತದಾನಿಗಳ ಸಂಪೂರ್ಣ ವಿವರದ ಕೈಪಿಡಿಯನ್ನು ತಯಾರಿಸಿದ್ದು ತುರ್ತು ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಇದ್ದವರು ಸಂಘದ ಯುವ ವಿಭಾಗವನ್ನು ಸಂಪರ್ಕಿಸಬಹುದು. ಇದಲ್ಲದೇ 700 ಕ್ಕೂ ಹೆಚ್ಚು ಯುವ ವಿಭಾಗದ ಸದಸ್ಯರು ತುರ್ತು ಸಂದರ್ಭದಲ್ಲಿ ರಕ್ತದಾನ ಮಾಡಲು ಸನ್ನದ್ಧರಾಗಿದ್ದಾರೆ. ಈಗಾಗಲೇ ಸಂಘದ ಅನೇಕ ಸದಸ್ಯರಿಗೆ ತುರ್ತು ಸಂದರ್ಭದಲ್ಲಿ ಯುವ ವಿಭಾಗದ ಸದಸ್ಯರು ರಕ್ತದಾನ ಮಾಡಿದ್ದಾರೆ.






### ಕೊಡಗು ಸಂತ್ರಸ್ಥರಿಗೆ ನೆರವು:

ಬಂಟರ ಸಂಘದ ಯುವ ವಿಭಾಗದ ಸದಸ್ಯರು ದಿನಾಂಕ 20.08.2018ರಂದು ಕೊಡಗಿನ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿ ಮನೆ, ಆಸ್ತಿ, ಕುಟುಂಬದವರನ್ನು ಕಳೆದುಕೊಂಡು ತೊಂದರೆಗೀಡಾದ ಕುಟುಂಬಗಳ ಜೊತೆ ಆಪ್ತ ಸಮಾಲೋಚನೆಗಳನ್ನು ನಡೆಸಿ ಅತೀ ಹೆಚ್ಚು ತೊಂದರೆಗೀಡಾದ 9 ಕುಟುಂಬಗಳನ್ನು ಗುರುತಿಸಿ,





ತದನಂತರ ಎಲ್ಲಾ ಒಂಬತ್ತು ಕುಟುಂಬದ ಸದಸ್ಯರುಗಳನ್ನು ಬಂಟರ ಸಂಘ ಬೆಂಗಳೂರಿಗೆ ವಾಹನ ಸೌಲಭ್ಯದ ಮೂಲಕ ಕರೆತಂದು ದಿನಾಂಕ 13.09.2018 ರಂದು ಗೌರಿ ಗಣೇಶ ಚತುರ್ಥಿಯ ಸುಸಂದರ್ಭದಲ್ಲಿ ಸಂಘದ ಸದಸ್ಯರು ದಾನಿಗಳು ಹಾಗೂ ಗಣ್ಯರ ಸಮ್ಮುಖದಲ್ಲಿ ಬಂಟರ ಸಂಘದಿಂದ ತಲಾ ರೂ. 50,000/– ದಂತೆ ಒಂಬತ್ತು ಬಂಟ ಕುಟುಂಬಗಳಿಗೆ ಆರ್ಥಿಕ ಸಹಾಯ ನೀಡಲಾಯಿತು.

**ಟೀಮ್ ಬಿಲ್ಡಿಂಗ್ ಚಟುವಟಿಕೆ:**

ದಿನಾಂಕ 23.09.2018ರಂದು ಯಲಚಗುಪ್ಪೆಯಲ್ಲಿ ಬಂಟರ ಸಂಘ ಬೆಂಗಳೂರು ಖರೀದಿಸಿದ ಭೂಮಿಯಲ್ಲಿ ಬಂಟರ ಸಂಘ ಯುವ ವಿಭಾಗವು ಟೀಮ್ ಬಿಲ್ಡಿಂಗ್ ಚಟುವಟಿಕೆಗಳನ್ನು ಏರ್ಪಡಿಸಿತ್ತು. ಇದು ಹೊಸದಾಗಿ ಖರೀದಿಸಿದ ಯಲಚಗುಪ್ಪೆ ಸ್ಥಳದಲ್ಲಿ ನಡೆದ ಪ್ರಥಮ ಕಾರ್ಯಕ್ರಮವಾಗಿದೆ. ಯುವ ತಂಡವನ್ನು ಗಟ್ಟಿಗೊಳಿಸಿ, ಯುವ ಸದಸ್ಯರು ಒಬ್ಬರನ್ನೊಬ್ಬರು ಅರಿತು ಬೆರೆಯುವ ವಾತಾವರಣವನ್ನು ಸೃಷ್ಟಿಸಿ ಮುಂದೆ ಒಗ್ಗಟ್ಟಿನಿಂದ ಸಂಘದ ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿದೆ.

ಟೀಮ್ ಬಿಲ್ಡಿಂಗ್ ಚಟುವಟಿಕೆ ಅಂಗವಾಗಿ 2 ತೆಂಗಿನ ಗಿಡಗಳನ್ನು ಯಲಚಗುಪ್ಪೆ ಜಾಗದ ಆವರಣದಲ್ಲಿ ನೆಡಲಾಯಿತು. ಬಳಿಕ ಯುವ ವಿಭಾಗದ ಮುಂದಿನ ಯೋಜನೆಗಳ ಬಗ್ಗೆ ಗುಂಪು ಚರ್ಚೆ ನಡೆಸಲಾಯಿತು. ತದನಂತರ ಮನೋರಂಜನಾ ಚಟುವಟಿಕೆಗಳಾದ ಡ್ಯಾನ್ಸ್, ಗುಂಪು ನೃತ್ಯ, ಟಂಗ್ ಟ್ವಿಸ್ಟರ್, ಹಾಡುಗಳು, ಮಿಮಿಕ್ರಿ ಇತ್ಯಾದಿಗಳಿಂದ ಪರಸ್ಪರ ಒಟ್ಟಿಗೆ ಸೇರಿ ಆನಂದಿಸುವಂತಾಯಿತು.

ಈ ಚಟುವಟಿಕೆಯಲ್ಲಿ ಯುವ ವಿಭಾಗದ 85 ಯುವಕ ಯುವತಿಯರು, ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸಂಘಕ್ಕೆ ಯಾವುದೇ ಹೊರೆಯಾಗದೇ ಯುವ ವಿಭಾಗದ ಸದಸ್ಯರು ಮತ್ತು ಯುವ ವಿಭಾಗದ ಚೇರ್‌ಪರ್ಸನ್ ಖರ್ಚನ್ನು ಭರಿಸಿರುತ್ತಾರೆ.






**ಸ್ವಚ್ಛ ಭಾರತ ಅಭಿಯಾನ**

ಯುವ ವಿಭಾಗ, ಬಂಟರ ಸಂಘ ಬೆಂಗಳೂರು ದಿನಾಂಕ 21.10.2018ರಂದು ಸ್ವಚ್ಛ ಭಾರತ ಅಭಿಯಾನವನ್ನು ಸಂಘದ ಸಂಕೀರ್ಣದಲ್ಲಿ ಉದ್ಘಾಟಿಸಿ ವಿಜಯನಗರದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಕೈಗೊಂಡಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಸನ್ಮಾನ್ಯ ಶ್ರೀ ಎ. ದೇವೇಗೌಡರು ನೆರವೇರಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಶ್ರೀ ಕೆ. ಉಮೇಶ್ ಶೆಟ್ಟಿ, ಸದಸ್ಯರು, ಬೃಹತ್ ಬೆಂಗಳೂರು

ಮಹಾನಗರ ಪಾಲಿಕೆ, ಗೋವಿಂದರಾಜನಗರ ವಾರ್ಡ್ ಹಾಗೂ ಅತ್ತಿಗುಪ್ಪೆ ವಾರ್ಡ್‌ನ ಬಿ.ಬಿ.ಎಂ.ಪಿ. ಸದಸ್ಯರಾದ ಡಾ. ಎಸ್. ರಾಜು ರವರು ಭಾಗವಹಿಸಿದ್ದರು.

ಸ್ವಚ್ಛತಾ ಅಂದೋಲನದಲ್ಲಿ 125 ಯುವ ವಿಭಾಗದ ಸದಸ್ಯರು ಭಾಗವಹಿಸಿ ಸಂಘದಿಂದ ವಿಜಯನಗರದ ಬಸ್ ಸ್ಟ್ಯಾಂಡ್‌ವರೆಗೆ ಸ್ವಚ್ಛತಾ ಕಾರ್ಯಕ್ರಮ ನೆರವೇರಿಸಿದ್ದು ಸ್ಥಳೀಯ ನಾಗರೀಕರಿಂದ ಪ್ರಶಂಸೆಗೆ ಪಾತ್ರವಾಗಿದೆ.




**ಭಜನಾ ಕಾರ್ಯಕ್ರಮ:**

ಬಂಟರ ಸಂಘದ ಯುವ ವಿಭಾಗವು ಸಂಘದ ಕೆಲವು ಹಿರಿಯ ಸದಸ್ಯರ ಸಲಹೆ, ಮಾರ್ಗದರ್ಶನ ಹಾಗೂ ಅಪೇಕ್ಷೆಯ ಮೇರೆಗೆ ಪ್ರಪ್ರಥಮವಾಗಿ ಅಕ್ಟೋಬರ್ 2018ರಿಂದ ಸಂಘದ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ಪ್ರತಿ ತಿಂಗಳ ಮೊದಲನೇ ಶನಿವಾರದಂದು ಸಂಜೆ 7 ಗಂಟೆಯಿಂದ 9 ಗಂಟೆಯವರೆಗೆ ಭಜನಾ ಕಾರ್ಯಕ್ರಮವನ್ನು ನೆರವೇರಿಸುತ್ತಿದ್ದೇವೆ. ಯುವ ವಿಭಾಗದ ಹಾಗೂ ಸಂಘದ ಸದಸ್ಯರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರೋತ್ಸಾಹಿಸುತ್ತಿದ್ದಾರೆ.




**ದಿವಂಗತ ಡಾ. ಮಧುಕರ ಶೆಟ್ಟಿಯವರ ಸ್ಮರಣಾರ್ಥ ಪೋಲಿಸ್ ಸಬ್–ಇನ್ಸ್‌ಪೆಕ್ಟರ್ ಉದ್ಯೋಗಾಕಾಂಕ್ಷಿ ಬಂಟ ಯುವಕ ಯುವತಿಯರಿಗೆ ಉಚಿತ ತರಬೇತಿ:**

ಬಂಟರ ಸಂಘ ಯುವ ವಿಭಾಗ ಮತ್ತು ಉದ್ಯೋಗ ಮಾಹಿತಿ ವಿಭಾಗದಿಂದ ಐ.ಪಿ.ಎಸ್. ಅಧಿಕಾರಿಯಾಗಿದ್ದ ದಿವಂಗತ ಡಾ. ಮಧುಕರ ಶೆಟ್ಟಿಯವರ ಸ್ಮರಣಾರ್ಥ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಆಯ್ಕೆಯಾಗಲು ಸಹಕಾರಿಯಾಗುವಂತೆ ದೈಹಿಕ ಪರೀಕ್ಷೆಯನ್ನು 29.09.2019ರಂದು ಮಂಗಳೂರಿನ ಮಂಗಳ ಕ್ರೀಡಾಂಗಣದಲ್ಲಿ ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಬಂಟರ ಯಾನೆ ನಾಡವರ ಮಾತೃ ಸಂಘದ ಅಧ್ಯಕ್ಷರಾದ ಶ್ರೀ ಕೆ. ಅಜಿತ್ ಕುಮಾರ್ ರೈ ಮಾಲಾಡಿಯವರು ಉದ್ಘಾಟಿಸಿದರು. ದೈಹಿಕ ಪರೀಕ್ಷೆಯಲ್ಲಿ ಕುಂದಾಪುರ, ಮಂಗಳೂರು, ಉಡುಪಿ ಹಾಗೂ ದಕ್ಷಿಣ ಕನ್ನಡದ ವಿವಿಧ ಭಾಗಗಳಿಂದ 58 ಅಭ್ಯರ್ಥಿಗಳು ಆಯ್ಕೆಯಾದರು. ದೈಹಿಕ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೂರು ತಿಂಗಳ ತರಬೇತಿ ಶಿಬಿರವನ್ನು ದಿನಾಂಕ 20.10.2019ರಂದು ಪ್ರಾರಂಭಿಸಲಾಯಿತು. ತರಬೇತಿ ಶಿಬಿರವನ್ನು ಶ್ರೀ ಕೆ. ಜಗನ್ನಾಥ ರೈ, ಡೆಪ್ಯುಟಿ ಸೂಪರೆಂಡೆಂಟ್ ಆಫ್ ಪೋಲಿಸ್ ಬೆಂಗಳೂರು ಇವರು ಉದ್ಘಾಟಿಸಿ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಪರೀಕ್ಷೆಯ ಬಗ್ಗೆ ಮಾರ್ಗದರ್ಶನ ನೀಡಿದರು. ತದನಂತರ ಮೂರು ತಿಂಗಳವರೆಗೆ 58 ಅಭ್ಯರ್ಥಿಗಳಿಗೆ ತರಬೇತಿಯನ್ನು ಬಂಟರ ಸಂಘದಲ್ಲಿ ನೀಡಲಾಯಿತು.





**ಹೊಸ ವರ್ಷಾಚರಣೆ:**

ಸಂಘದ ಯುವ ವಿಭಾಗವು ನಮ್ಮ ನೆಲದಲ್ಲಿ ನಮ್ಮವರು ಹೊಸ ವರ್ಷವನ್ನು ಆಚರಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದು, ಸಂಘದ ಸದಸ್ಯರು ಹಾಗೂ ಕುಟುಂಬ ವರ್ಗದವರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ. ಹೊಸ ವರ್ಷದ ಆಚರಣೆಯು ಅನೇಕ ಮನೋರಂಜನಾ ಕಾರ್ಯಕ್ರಮಗಳನ್ನು ಒಳಗೊಂಡಿದ್ದು ವಿವಿಧ ಬಗೆಯ ಆಟೋಟ ಸ್ಪರ್ಧೆ, ಸಮೂಹ ನೃತ್ಯ, ಸಂಗೀತ, ಡಿ.ಜೆ. ಇತ್ಯಾದಿಗಳನ್ನು ಒಳಗೊಂಡಿತ್ತು.

ಹೊಸ ವರ್ಷವನ್ನು ಸಂಘದಲ್ಲಿ ಸತತ 2 ವರ್ಷ ಆಚರಿಸಿದ್ದು ಪ್ರಾರಂಭದ ವರ್ಷದಲ್ಲಿ 741 ಜನರು ಭಾಗವಹಿಸಿದ್ದರು. 2ನೇ ವರ್ಷದಲ್ಲಿ ಭಾಗವಹಿಸುವಿಕೆ 1151ಕ್ಕೆ ಏರಿತ್ತು. ಹೊಸ ವರ್ಷವನ್ನು ನಮ್ಮ ಸಂಘದ ಸದಸ್ಯರು ಹಾಗೂ ಅವರ ಕುಟುಂಬ ವರ್ಗದವರಿಗೆ ನಮ್ಮ ಸಂಘದ ಉತ್ತಮ ವಾತಾವರಣದಲ್ಲಿ ಸ್ನೇಹಿತರು ಹಾಗೂ ಕುಟುಂಬ ವರ್ಗದವರ ಜೊತೆಗೂಡಿ ಆಚರಿಸಲು ಅವಕಾಶ ಮಾಡಿ ಕೊಡುವ ದೃಷ್ಟಿಯಿಂದ ಆಯೋಜಿಸಲಾಗಿತ್ತು.





**ಅಜಿತ್ ಶೆಟ್ಟಿ**
ಸಂಚಾಲಕರು, ಯುವ ವಿಭಾಗ

**ಡಾ. ವೈ. ಉಮಾನಾಥ ಶೆಟ್ಟಿ**
ಚೇರ್‌ಪರ್ಸನ್, ಯುವ ವಿಭಾಗ

# ಬಂಟರ ಸಂಘ ಬೆಂಗಳೂರು
# ಮಾನವ ಸಂಪನ್ಮೂಲ ಮತ್ತು ಉದ್ಯೋಗ ಮಾಹಿತಿ ವಿಭಾಗ–2018–2020

ದಿನಾಂಕ 05.09.2018ರಂದು ಸಂಘದ ಮಾನವ ಸಂಪನ್ಮೂಲ ಹಾಗೂ ಉದ್ಯೋಗ ಮಾಹಿತಿ ಸಮಿತಿಯ ವತಿಯಿಂದ Bunts HR & Bunts Professionals ಸಭೆ ಆಯೋಜಿಸಲಾಗಿತ್ತು. ಸಭೆಯಲ್ಲಿ ಸಮುದಾಯದ ಗ್ರಾಮೀಣ ಹಾಗೂ ನಗರ ಪ್ರದೇಶದ ಉದ್ಯೋಗಾರ್ಥಿಗಳಿಗೆ ಸೂಕ್ತ ಉದ್ಯೋಗ ದೊರಕಿಸಿಕೊಡುವಲ್ಲಿ ಹಾಗೂ ಅಭ್ಯರ್ಥಿಗಳಿಗೆ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಿ ಚರ್ಚಿಸಲಾಯಿತು.




ನವೆಂಬರ್ 18, 2018ರಂದು ಬಂಟ್ಸ್ ಉದ್ಯೋಗಾಕಾಂಕ್ಷಿಗಳಿಗಾಗಿ ಸಮಿತಿಯ ವತಿಯಿಂದ ವೃತ್ತಿ ಜೀವನ ಸಂಪರ್ಕ (Career connect) ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಲಾಯಿತು.

ಬೆಳಗಿನ ಅಧಿವೇಶನದಲ್ಲಿ 75ಕ್ಕೂ ಹೆಚ್ಚು ಬಂಟ್ಸ್ ಉದ್ಯೋಗಾಕಾಂಕ್ಷಿಗಳು ಸುಮಾರು 40 ಹಿರಿಯ ಬಂಟ್ಸ್ ಹೆಚ್.ಆರ್. ಮತ್ತು ವಿವಿಧ ಬಹುರಾಷ್ಟ್ರೀಯ ಕಂಪೆನಿಗಳ ಕ್ರಿಯಾತ್ಮಕ ತಜ್ಞರೊಂದಿಗೆ ಸಂವಹನ ನಡೆಸಲು ಅವಕಾಶವನ್ನು ಪಡೆದರು. ಬಂಟ್ಸ್ ಉದ್ಯೋಗಾಕಾಂಕ್ಷಿಗಳಿಗೆ ಇದು ಬಹಳ ವಿಶಿಷ್ಟವಾದ ಅವಕಾಶವಾಗಿತ್ತು. ಅದರಲ್ಲಿ ಸಂದರ್ಶನಗಳನ್ನು ಹೇಗೆ ಎದುರಿಸುವುದು, ಗುಂಪು ಚರ್ಚೆಗಳನ್ನು ಹೇಗೆ ನಿರ್ವಹಿಸುವುದು ಹಾಗೂ ಸಾಮಾನ್ಯ ಶಿಷ್ಟಾಚಾರಗಳ ಬಗ್ಗೆ ತಿಳಿಸಿಕೊಡಲಾಯಿತು. ಈ ಕಾರ್ಯಕ್ರಮವು ಹಲವಾರು ಉದ್ಯೋಗಾಕಾಂಕ್ಷಿಗಳಿಗೆ ಕೆಲವು ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಮುಂದಿನ ಸುತ್ತಿನ ಆಯ್ಕೆ ಪ್ರಕ್ರಿಯೆಗೆ ಅರ್ಹತೆ ಪಡೆಯಲು ಅವಕಾಶವನ್ನು ಸೃಷ್ಟಿಸಿತು.

ಮಧ್ಯಾಹ್ನದ ಅಧಿವೇಶನವು ಸಂಘದ ಮಾನವ ಸಂಪನ್ಮೂಲ ಮತ್ತು ಉದ್ಯೋಗ ಮಾಹಿತಿ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಸುರೇಖಾ ಶೆಟ್ಟಿಯವರ ಸ್ವಾಗತ ಭಾಷಣದೊಂದಿಗೆ ಪ್ರಾರಂಭವಾಯಿತು. ಕಾರ್ಯಕ್ರಮದ ಪ್ರಮುಖ ಅಂಶವೆಂದರೆ ಇಬ್ಬರು ಪ್ರಖ್ಯಾತ ಭಾಷಣಕಾರರಾದ ಶ್ರೀ ಪ್ರತಾಪ್ ಹೆಗ್ಡೆ ಭವಿಷ್ಯದ ಅನುಷ್ಠಾನ ಪ್ರವೃತ್ತಿಗಳು, ಸವಾಲುಗಳು ಮತ್ತು ಅವಕಾಶಗಳ ಬಗ್ಗೆ ಯುವ ಬಂಟರನ್ನು ಸಂವೇದನಾಶೀಲಗೊಳಿಸಿದರು ಮತ್ತು ಡಾ. ವಿದ್ಯಾ ಶೆಟ್ಟಿ ಎಂದೆಂದಿಗೂ ಬದಲಾಗುತ್ತಿರುವ ಉದ್ಯೋಗ ಮಾರುಕಟ್ಟೆಯಲ್ಲಿ ಒಬ್ಬರು ಹೇಗೆ ತಮ್ಮನ್ನು ತಾವು ಸಜ್ಜುಗೊಳಿಸಬೇಕೆಂಬುದರ ಬಗ್ಗೆ ಸ್ಫೂರ್ತಿದಾಯಕ ಉದಾಹರಣೆಗಳೊಂದಿಗೆ ಮಾತನಾಡಿದರು.

ಈ ಸಂದರ್ಭವನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ಎಂದಿಗೂ ಮನೋಭಾವವನ್ನು ಬಿಟ್ಟುಕೊಡದೇ ಜೀವನದಲ್ಲಿ ಯಶಸ್ವಿಯಾಗಲು ಒಬ್ಬರ ಸ್ವಯಂ ಪ್ರಯತ್ನವನ್ನು ಒತ್ತಿ ಹೇಳಿದರು. ಕಾರ್ಯಕ್ರಮದ ನಿರೂಪಣೆಯನ್ನು ಕುಮಾರಿ ಪ್ರಕೃತಿ ಶೆಟ್ಟಿ ಮಾಡಿದರು ಹಾಗೂ ಸಂಚಾಲಕರಾದ ಶ್ರೀ ಚಂದ್ರಶೇಖರ ಶೆಟ್ಟಿಯವರ ಧನ್ಯವಾದಗಳೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಬಂಟರ ಸಂಘ ಮಾನವ ಸಂಪನ್ಮೂಲ ಮತ್ತು ಉದ್ಯೋಗ ಮಾಹಿತಿ ವಿಭಾಗ ಹಾಗೂ ಯುವ ವಿಭಾಗ ಐ.ಪಿ.ಎಸ್. ಅಧಿಕಾರಿಯಾಗಿದ್ದ ದಿವಂಗತ ಡಾ. ಮಧುಕರ ಶೆಟ್ಟಿಯವರ ಸ್ಮರಣಾರ್ಥ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಆಯ್ಕೆಯಾಗಲು ಸಹಕಾರಿಯಾಗುವಂತೆ ದೈಹಿಕ ಪರೀಕ್ಷೆಯನ್ನು 29.09.2019ರಂದು ಮಂಗಳೂರಿನ ಮಂಗಳ ಕ್ರೀಡಾಂಗಣದಲ್ಲಿ ಆಯೋಜಿಸಲಾಯಿತು. ಕಾರ್ಯಕ್ರಮವನ್ನು ಬಂಟರ ಯಾನೆ ನಾಡವರ ಮಾತೃ ಸಂಘದ

ಅಧ್ಯಕ್ಷರಾದ ಶ್ರೀ ಕೆ. ಅಜಿತ್ ಕುಮಾರ್ ರೈ ಮಾಲಾಡಿಯವರು ಉದ್ಘಾಟಿಸಿದರು. ದೈಹಿಕ ಪರೀಕ್ಷೆಯಲ್ಲಿ ಕುಂದಾಪುರ, ಮಂಗಳೂರು, ಉಡುಪಿ ಹಾಗೂ ದಕ್ಷಿಣ ಕನ್ನಡದ ವಿವಿಧ ಭಾಗಗಳಿಂದ 58 ಅಭ್ಯರ್ಥಿಗಳು ಆಯ್ಕೆಯಾದರು. ದೈಹಿಕ ಪರೀಕ್ಷೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಮೂರು ತಿಂಗಳ ತರಬೇತಿ ಶಿಬಿರವನ್ನು ದಿನಾಂಕ 20.10.2019ರಂದು ಪ್ರಾರಂಭಿಸಲಾಯಿತು. ತರಬೇತಿ ಶಿಬಿರವನ್ನು ಶ್ರೀ ಕೆ. ಜಗನ್ನಾಥ ರೈ, ಡೆಪ್ಯುಟಿ ಸೂಪರೆಂಡೆಂಟ್ ಆಫ್ ಪೋಲಿಸ್ ಬೆಂಗಳೂರು ಇವರು ಉದ್ಘಾಟಿಸಿ ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಪರೀಕ್ಷೆಯ ಬಗ್ಗೆ ಮಾರ್ಗದರ್ಶನ ನೀಡಿದರು. ತದನಂತರ ಮೂರು ತಿಂಗಳವರೆಗೆ 58 ಅಭ್ಯರ್ಥಿಗಳಿಗೆ ತರಬೇತಿಯನ್ನು ಬಂಟರ ಸಂಘದಲ್ಲಿ ನೀಡಲಾಯಿತು.

ಬೆಂಗಳೂರಿನಲ್ಲಿ ಇರುವ ಅನೇಕ ಪ್ರಸಿದ್ಧ ಕಂಪೆನಿಗಳ ಬಂಟ ಸಮುದಾಯದ ಮಾನವ ಸಂಪನ್ಮೂಲ ಅಧಿಕಾರಿಗಳ ಸಮಾಗಮ "ಸಂಪರ್ಕ 2019" ಕಾರ್ಯಕ್ರಮವು ನಗರದ ಪ್ರಸಿದ್ಧ ಹೋಟೆಲ್ ತಾಜ್ ವಿವಾಂತದಲ್ಲಿ ದಿನಾಂಕ 16.11.2019 ರಂದು ನಡೆಯಿತು.

ಕಾರ್ಯಕ್ರಮವನ್ನು ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಶ್ರೀ ಭಾಸ್ಕರ ರಾವ್‌ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಲುಮೆನ್ಸ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಬಂಟ್ ಚೇಂಬರ್ ಆಫ್ ಕಾಮರ್ಸ್ ಮತ್ತು ಇಂಡಸ್ಟ್ರಿ ಇಲ್ಲಿನ ಅಧ್ಯಕ್ಷರಾದ ಶ್ರೀ ಕೆ. ಸಿ. ಶೆಟ್ಟಿಯವರು ಭಾಗವಹಿಸಿದರು. ವೇದಿಕೆಯಲ್ಲಿ ಬಂಟರ ಸಂಘ ಬೆಂಗಳೂರು ಇಲ್ಲಿನ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು, ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ ಮಧುಕರ ಎಂ. ಶೆಟ್ಟಿಯವರು ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಚಂಚಲತೆ, ಅನಿಶ್ಚಿತತೆ, ಸಂಕೀರ್ಣತೆ ಮತ್ತು ಅಸ್ಪಷ್ಟತೆ (VUCA) ಇರುವ ಮುಂದಿನ ದಿನಗಳಲ್ಲಿ ಮಾನವ ಸಂಪನ್ಮೂಲದ ಭವಿಷ್ಯವೇನು ಅನ್ನುವ ವಿಚಾರದ ಕುರಿತಾದ ಚರ್ಚಾ ಸಂಕೀರ್ಣ ಕಾರ್ಯಕ್ರಮವನ್ನು ಹಿರಿಯ ಮಾನವ ಸಂಪನ್ಮೂಲ ಅಧಿಕಾರಿಗಳಾದ ಶ್ರೀ ರಾಜಶೇಖರ್ ರೈ, ಶ್ರೀ ಭಾಸ್ಕರ್ ಭಂಡಾರಿ, ಶ್ರೀಮತಿ ಶ್ರುತಿ ಆಳ್ವ, ಶ್ರೀಮತಿ ಪ್ರಕೃತಿ ಶೆಟ್ಟಿಯವರು ನೆರವೇರಿಸಿಕೊಟ್ಟರು. ತದನಂತರ ಹಂಬಲ್ ಪೊಲಿಟಿಷಿಯನ್ ನೊಗರಾಜ್ ಚಲನಚಿತ್ರದ ನಿರ್ದೇಶಕರಾದ ಸಾದ್ ಖಾನ್ ಮತ್ತು ಹೆಸರಾಂತ ನಟ ಪ್ರಮೋದ್ ಶೆಟ್ಟಿಯವರು ವಿಶೇಷ ಮನರಂಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಸುಮಾರು 150 ಕ್ಕೂ ಹೆಚ್ಚು ಮಾನವ ಸಂಪನ್ಮೂಲ ವಿಭಾಗದ ಅಧಿಕಾರಿಗಳು ಭಾಗವಹಿಸಿದ್ದರು.

**ಚಂದ್ರಶೇಖರ್ ಶೆಟ್ಟಿ**
ಸಂಚಾಲಕರು

**ಸುರೇಖಾ ಶೆಟ್ಟಿ**
ಚೇರ್‌ಪರ್ಸನ್

# ಬೆಂಗಳೂರು ಬಂಟರ ಸಂಘ
# ಸಾಂಸ್ಕೃತಿಕ ಸಮಿತಿ ವರದಿ 2018–20

**ಅವಲೋಕನ**

ಬೆಂಗಳೂರು ಬಂಟರ ಸಂಘದಲ್ಲಿ ವರ್ಷಂಪ್ರತಿ ನಡೆಯುತ್ತಿದ್ದ ದೀಪಾವಳಿ ಹಾಗೂ ಬಿಸು ಹಬ್ಬದ ಸಾಂಕೇತಿಕ ಆಚರಣೆಯನ್ನು, ಈ ಸಾಲಿನ ಸಾಂಸ್ಕೃತಿಕ ಸಮಿತಿಯ ಆಶ್ರಯದಲ್ಲಿ ವಿಶೇಷವಾಗಿ ಆಚರಿಸಲಾಯಿತು. 2018–20 ಸಾಲಿನ ಸಾಂಸ್ಕೃತಿಕ ಸಮಿತಿಯು ಕೇವಲ ಮನೋರಂಜನಾ ಕಾರ್ಯಕ್ರಮಗಳಿಗೆ ಆದ್ಯತೆ ನೀಡದೆ ಕರಾವಳಿ ಮಣ್ಣಿನ ಸಂಸ್ಕೃತಿಯನ್ನು ಬೆಂಗಳೂರಿನಲ್ಲಿ ನೆಲೆಸಿರುವ ಬಂಟರಿಗೆ, ಹಾಗೂ ಮುಂದಿನ ಪೀಳಿಗೆಯ ಬಂಟರಿಗೆ ತೋರಿಸುವಲ್ಲಿ ಯಶಸ್ವಿಯಾಯಿತು. ಸಂಜೆ 6ರ ನಂತರ ಆರಂಭವಾಗುತ್ತಿದ್ದ ಕಾರ್ಯಕ್ರಮನ್ನು ಬೆಳಗಿನಿಂದಲೇ ಆರಂಭಿಸಿ ಕರಾವಳಿಯಲ್ಲಿ ಹಬ್ಬಗಳನ್ನು ಆಚರಿಸುವ ಮಾದರಿಯಲ್ಲೇ ಆಚರಿಸಿದ್ದು ವಿಶೇಷ. ಸಭಾಂಗಣದ ಒಳಗೆ ನಿರಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದರೆ, ಸಭಾಂಗಣದ ಹೊರಗೆ ಕರಾವಳಿಯ ಸಂಸ್ಕೃತಿಯ ಹಬ್ಬಗಳ ಆಚರಣೆಯ ವಿಧಾನಗಳು ನಿರಂತರ ನಡೆದು ಪಾಲ್ಗೊಂಡವರ ಮನಸಿಗೆ ಮುದ ನೀಡಿತು.

ಪ್ರತಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲೂ ಸುಮಾರು 350 ರಿಂದ 400 ಸದಸ್ಯರು ಮತ್ತು ಅವರ ಮಕ್ಕಳು ಭಾಗವಹಿಸಿದ್ದು "ದಾಖಲೆಯೇ". ಪ್ರತಿ ಕಾರ್ಯಕ್ರಮದಲ್ಲಿ 4 ರಿಂದ 5 ಸಾವಿರ ಸದಸ್ಯರು ಹಾಗೂ ಅವರ ಬಂಧು ಮಿತ್ರರು ಸೇರಿದ್ದು ಒಂದು ದಾಖಲೆ ಮಾತ್ರ ಅಲ್ಲ ಅವರಲ್ಲಿ ಒಂದು ಬಾಂಧವ್ಯ ಬೆಳೆಯಲು ಹಾಗೂ ಕರಾವಳಿಯ ಮಣ್ಣಿನ ಮತ್ತು ಸಂಸ್ಕೃತಿಯ ಬಗೆಗೆ ಒಲವು ಮೂಡಲು ಕಾರಣವಾದದ್ದು ಕೂಡ ನಿಜ.

ಯಕ್ಷಗಾನದ ವೇಷಭೂಷಣ ತೊಟ್ಟ ರಂಗದಲ್ಲಿ ಫೂಟೋ ತೆಗೆದುಕೊಳ್ಳಬೇಕೆಂಬುದು ಎಷ್ಟೋ ಜನ ಕರಾವಳಿಗರ ಕನಸು. ಆದರೆ ಕಲಾವಿದರಲ್ಲದವರಿಗೆ ಸಾಧ್ಯಾವಾಗುತ್ತಿರಲಿಲ್ಲ. ಅಂತಹ ಸದಸ್ಯರಿಗಾಗಿ ವಿಶೇಷವಾಗಿ ಯಕ್ಷಗಾನ ವೇಷಭೂಷಣ ಧರಿಸಿ ಅದಕ್ಕಾಗಿಯೆ ನಿರ್ಮಿಸಿದ ರಂಗಸ್ಥಳದಲ್ಲಿ ಫೂಟೋ ತೆಗೆಯುವ ಅವಕಾಶ ಕೂಡ ಮೊತ್ತ ಮೊದಲಿಗೆ ಸಾಂಸ್ಕೃತಿಕ ಸಮಿತಿ ಒದಗಿಸಿಕೊಟ್ಟಿತು.

ರಾಧಾಭಾಯಿ ತಿಮ್ಮಪ್ಪಭಂಡಾರಿ ಸ್ಮಾರಕ ಸಾಂಸ್ಕೃತಿಕ ಸ್ಪರ್ಧೆಯನ್ನು ಕೂಡ ಈ ಬಾರಿ ಭಿನ್ನವಾಗಿ ನಡೆಸುವಲ್ಲಿ 3 ದಿನಗಳ ಕಾಲ ನಡೆಯುವ ಸ್ಪರ್ಧೆಯಲ್ಲಿ ಸುಮಾರು 600 ಸದಸ್ಯರು ಭಾಗವಹಿಸಿದ್ದು 150 ಕ್ಕೂ ಹೆಚ್ಚು ಜನರಿಗೆ ಬಹುಮಾನಗಳನ್ನು ವಿತರಿಸಲಾಯ್ತು. ಬಹುಮಾನ ವಿತರಣೆಯಲ್ಲೂ ಕೂಡ, ಫಲಕ, ನಗದು ಹಾಗೂ ಸರ್ಟಿಫಿಕೇಟ್ ಗಳನ್ನು ಒಂದು ಕಿಟ್ ನಲ್ಲಿ ಇರಿಸಿ, ನಂಬರಿಂಗ್ ವ್ಯವಸ್ಥೆಯನ್ನು ಮಾಡಿ ಕೇವಲ 30 ನಿಮಿಷಗಳಲ್ಲಿ ಬಹುಮಾನ ವಿತರಣೆಯನ್ನು ನೆರವೇರಿಸಿದ್ದು ಬೆಂಗಳೂರು ಬಂಟರ ಸಂಘದ ಮಟ್ಟಿಗೆ ವಿಶೇಷ ದಾಖಲೆ.

ಅಂತರ ಬಂಟರ ಸಂಘ ಸಾಂಸ್ಕೃತಿಕ ಸ್ಪರ್ಧೆಯನ್ನು ಅತ್ಯಂತ ಅಚ್ಚುಕಟ್ಟಾಗಿ ವಿಜೃಂಭಣೆಯಿಂದ ನೆರವೇರಿಸಿದ ಸಾಂಸ್ಕೃತಿಕ ಸಮಿತಿಯು, ಗುರುಪುರ ಬಂಟರ ಸಂಘದ ಆಶ್ರಯದಲ್ಲಿ ನಡೆದ ಸ್ಪರ್ಧೆಯಲ್ಲಿ ಭಾಗವಹಿಸಿ ಒಂದು ಲಕ್ಷ ರೂಪಾಯಿಗಳೊಂದಿಗೆ ಪ್ರಥಮ ಬಹುಮಾನ ಗೆದ್ದು ತಂದು ಮತ್ತೊಂದು ದಾಖಲೆ ನಿರ್ಮಿಸಿತು.

ಸಂಸ್ಕೃತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲದೆ ಕೊಡಗುವಿನಲ್ಲಿ ನಡೆದ ನೆರೆ ದುರಂತದ ಸಂತ್ರಸ್ತರಿಗೆ ನೆರವಾಗಲು ಸಾಂಸ್ಕೃತಿಕ ಸಮಿತಿಯ ವತಿಯಿಂದ ಒಂದು ಲಕ್ಷದ ಹನ್ನೊಂದು ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಕೊಡಲಾಯ್ತು. ಕೊರೊನಾದಿಂದ ಸಂಕಷ್ಟಕೀಡಾದ ಬಡ ಕುಟುಂಬಗಳಿಗೆ ವಿತರಿಸಲಾದ ಆಹಾರ ಕಿಟ್ ಪೂರೈಸಲು ನೆರವನ್ನು ನೀಡಲಾಯಿತು.

ಇಷ್ಟೆಲ್ಲ ಕಾರ್ಯಕ್ರಮಗಳನ್ನು ನಡೆಸಲು ಬಂಟರ ಸಂಘಕ್ಕೆ ಯಾವುದೇ ಆರ್ಥಿಕ ಹೊರೆಯನ್ನು ನೀಡದೆ ಹಲವಾರು

ಕಂಪನಿಗಳ ಪ್ರಾಯೋಜಕತ್ವವನ್ನು ಪಡೆದು, ಹಾಗೆಯೇ, ಕೆಲವು ದಾನಿಗಳ ನೆರವು ಪಡೆದು ಆಚರಿಸಿ, ಸುಮಾರು ಒಂದು ಲಕ್ಷ ರೂಪಾಯಿಗಳನ್ನು ಉಳಿಸಲಾಯಿತು.

**ದೀಪಾವಳಿ ಸಂಭ್ರಮ – 2018**

"ಗುತ್ತಿನ ಮನೆ, ಮನೆ ಎದುರು ಭತ್ತದ ತಿರಿ, ಬೈ ಹುಲ್ಲಿನ ಕುತ್ತರಿ, ತುಳಸಿ ಕಟ್ಟೆ, ಕಟಾವು ಮಾಡಿದ ಗದ್ದೆ, ದನದ ಕೊಟ್ಟಿಗೆ ಇವೆಲ್ಲವೂ ನಮ್ಮ ಬಾಲ್ಯದ ದಿನಗಳನ್ನು ನೆನಪಿಸಿದವು. ಆ ದಿನಗಳಲ್ಲಿ ನಾವು ನಮ್ಮ ಮನೆಗಳಲ್ಲಿ ಆಚರಿಸಿದ ದೀಪಾವಳಿಯನ್ನು ಮತ್ತೆ ನಮ್ಮ ಕಣ್ಣ ಮುಂದೆ ತಂದಿರಿಸಿದಿರಿ, ನಿಜಕ್ಕೂ ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನ ಉಳಿಸಿ ಬೆಳೆಸುವಲ್ಲಿ ಸಂಘದ ಕಾರ್ಯ ನಿಜಕ್ಕೂ ಶ್ಲಾಘನೀಯ" ಎಂದು ಮಾಜಿ ವಿಧಾನ ಪರಿಷತ್ ಸದಸ್ಯೆ ಶ್ರೀಮತಿ ಭಾರತಿ ಶೆಟ್ಟಿ ಹೇಳಿದರು.



ಬಂಟರ ಸಂಘ ಬೆಂಗಳೂರು ಇದರ ಸಾಂಸ್ಕೃತಿಕ ಸಮಿತಿ ವತಿಯಿಂದ ಸಂಘದ ಆವರಣದಲ್ಲಿ ನಡೆದ ದೀಪಾವಳಿ ಸಂಭ್ರಮ ಸಾಕಷ್ಟು ಹೊಸತನಗಳಿಗೆ ಸಾಕ್ಷಿಯಾಗಿದೆ. ಕರಾವಳಿ ಜಿಲ್ಲೆಗಳಿಂದ ಮಹಾನಗರಿ ಬೆಂಗಳೂರಿಗೆ ಆಗಮಿಸಿ ಇಲ್ಲಿಯೇ ನೆಲೆ ಕಂಡು ಜನ್ಮಭೂಮಿ ಮತ್ತು ಕರ್ಮಭೂಮಿ ಎರಡರ ಏಳಿಗೆಗೆ ಬಂಟರ ಕೊಡುಗೆ ಅಪಾರ. ಅದೇ ರೀತಿ ಎಲ್ಲಿಯೇ ಹೋದರೂ ನಾವು ನಮ್ಮ ಸಂಸ್ಕೃತಿ, ಆಚರಣೆ, ಪರಂಪರೆಗಳನ್ನು ಜೊತೆಯಾಗಿ ತೆಗೆದುಕೊಂಡು ಬಂದವರು ಅದರ ಜೊತೆಗೆ ಬೆಳೆದವರು. ನಮ್ಮ ಆಚರಣೆಗಳು ಅದರ ವೈಶಿಷ್ಟ್ಯಗಳು ಮುಂದಿನ ಪೀಳಿಗೆಗೂ ಮುಂದುವರೆಯಬೇಕು. ಅದರ ಮಹತ್ವ ಅವರೂ ತಿಳಿಯುವಂತಾಗಬೇಕು ಎನ್ನುವ ನಿಟ್ಟಿನಲ್ಲಿ ಈ ಬಾರಿ ವಿಶೇಷವಾಗಿ ಆಚರಿಸಲಾಯಿತು.

ಊರ ಜಾತ್ರೆಯ ಆರಂಭವೆಂದರೆ ಅದು ಕೊಡಿ ಏರಿಸುವುದು ಅಥವಾ ಗರಣ ಕಟ್ಟುವುದು. ಅದನ್ನೆ ಮಾದರಿಯಾಗಿಟ್ಟುಕೊಂಡು ದೀಪಾವಳಿಯ ಸಂದರ್ಭ ಗೂಡು ದೀಪವನ್ನು ಏರಿಸಿ, ದೀಪಾವಳಿ ವಿಶೇಷ ಬೂದು ನೀರಿನ ಸ್ನಾನದ ಸಾಂಕೇತಿಕ ಹರಿಗೆ ಅತಿಥಿಗಳಿಂದ ನೀರು ತುಂಬಿಸಿ, ದೀಪ ಬೆಳಗಿಸಿ, ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಇದಕ್ಕೂ ಮುಂಚಿತವಾಗಿ ದನದ ಕೊಟ್ಟಿಗೆಯಲ್ಲಿ ದನಗಳಿಗೆ ವಿಶೇಷ ಪೂಜೆ ನಡೆಸಿ, ಅವುಗಳಿಗೆ ಭತ್ತ ಹಿಟ್ಟು ನೀಡಿ ನಮಸ್ಕರಿಸಿ ಅತಿಥಿಗಳನ್ನು ವೇದಿಕೆಗೆ ಕರೆತರಲಾಯಿತು.

ಬೆಳಗ್ಗೆ ರೂಪಕಲಾ ತಂಡ ಕುಂದಾಪುರ ಇವರು ನೆಡೆಸಿಕೊಟ್ಟ ಮದುಮಗ 3 ನಾಟಕ ನೆರೆದಿದ್ದ ಜನರನ್ನ ನಗೆಗಡಲಿನಲ್ಲಿ ತೇಲಿಸಿತು. ಬೆಂಗಳೂರಿನ ಪೀಣ್ಯ ದಾಸರಹಳ್ಳಿ, ಮೂಲ್ಕಿ ಸುಂದರರಾಮ ಶೆಟ್ಟಿ ನಗರ ಮತ್ತು ಯಲಹಂಕ ವಲಯದ ಬಂಟರ ಸಂಘದ ಸದಸ್ಯರು ನಡೆಸಿಕೊಟ್ಟ ದೀಪಾವಳಿ ವೈಭವ ವಿಶೇಷ ಪ್ರಸಂಶೆಗೆ ಪಾತ್ರವಾಯಿತು. ಬಲೆ ತೆಲಿಪಾಲೆ ಖ್ಯಾತಿಯ ಉಮೇಶ ಮಿಜಾರು ಅವರ ತಂಡ ನಡೆಸಿಕೊಟ್ಟ ನಾಟಕ ಕಾರ್ಯಕ್ರಮದ ಮೆರುಗು ಹೆಚ್ಚಿಸಿತು.

ನಮ್ಮ ಸಂಘದ ಸದಸ್ಯರು ನಡೆಸಿಕೊಟ್ಟ ದೀಪಾವಳಿ ರೋಮಾಂಚನ ನೃತ್ಯ ರೂಪಕ ಕಾರ್ಯಕ್ರಮ ನೆರೆದ ಜನಸ್ತೋಮದ ಮನಸೂರೆಗೊಂಡಿತು. ಇದರ ಕೊನೆಯಲ್ಲಿ ನೆರೆದಿದ್ದ ಜನರಿಂದ ಒಮ್ಮೆಲೆ ಮೊಬೈಲ್ ಟಾರ್ಚಗಳನ್ನು ಬೆಳಗಿಸಿ ಬೆಳಕಿನ ತೋರಣವನ್ನು ನಿರ್ಮಿಸಿ ದೇಶ ಕಾಯುವ ಯೋಧರಿಗೆ, ಅನ್ನ ನೀಡುವ ರೈತರಿಗೆ, ನಮ್ಮ ಸಂಘಕ್ಕಾಗಿ ದುಡಿದ ಹಿರಿಯರಿಗೆ ಗೌರವ ಸಲ್ಲಿಸಲಾಯಿತು.

ಮದುವೆ ಎಂದರೆ ಸಂಭ್ರಮ ಅದರಲ್ಲೂ, ಬಂಟರ ಮದುವೆ ಎಂದರೆ ವಿಶೇಷವಾದ ಸಂಪ್ರದಾಯಗಳು. ಹೆಣ್ಣು ನೋಡುವ ಶಾಸ್ತ್ರದಿಂದ ಹಿಡಿದು ಎಲ್ಲಾ ಶಾಸ್ತ್ರಗಳನ್ನು ಫ್ಯಾಶನ್ ಶೋ ಮುಂಖಾಂತರವಾಗಿ ಎಲ್ಲರ ಮುಂದೆ ಪ್ರಸ್ತುತ ಪಡಿಸಿದ ನಮ್ಮ ಸಂಘದ ಸದಸ್ಯರ ಪ್ರಯತ್ನ ಮೆಚ್ಚುವಂತದ್ದು.



ಈ ಬಾರಿಯ ದೀಪಾವಳಿ ವಿಶೇಷವಾಗಿ ಸಾಂಪ್ರದಾಯಿಕ ಆಚರಣೆಗಳಿಂದ ಗಮನ ಸೆಳೆಯಿತು. ಗದ್ದೆಗೆ ಹೂ ಹಾಕಿ, ದೀಪ ಬೇಳಗಿಸಿ ಬಲೀಂದ್ರನ ಕರೆದು ಬಲೀಂದ್ರ ಪೂಜೆ, ಹೊಲಿ ರಾಶೀ ಪೂಜೆ, ಲಕ್ಷೀ ಪೂಜೆ, ಅಂಗಡಿ ಪೂಜೆ, ಗೋ ಪೂಜೆ, ತುಳಸಿ ಪೂಜೆ ಮೂಲ ಆಚರಣೆಗಳಿಗೆ ಧಕ್ಕೆಯಾಗದಂತೆ ಆಚರಿಸಿ ನಮ್ಮ ಮಕ್ಕಳಿಗೆ ಈ ಆಚರಣೆಗಳ ಮಹತ್ವ ತಿಳಿಸಲಾಯಿತು.

ಇನ್ನು ಕಂಗೀಲು ಕುಣಿತ, ಹೋಳಿ ಸಮಯದಲ್ಲಿ ನಡೆಯುವ ಕೋಲಾಟದ ಕುಣಿತ, ಬೆಂಕಿಯ ಚೆಂಡಿನ ಜೊತೆ ಯುವತಿಯರು ನಡೆಸಿಕೊಟ್ಟ ತಾಲೀಮು ಇಡೀ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು.

**ಬಿಸು ಸಡಗರ – 2019**

ದಿನಾಂಕ 14.04.2019ರ ಭಾನುವಾರದಂದು ಸೌರಮಾನ ಯುಗಾದಿ ಹಬ್ಬವನ್ನು (ಬಿಸು ಸಡಗರ) ಬಂಟರ ಸಂಘ ಬೆಂಗಳೂರಿನಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಬೆಳಿಗ್ಗೆ 10.30 ಕ್ಕೆ ಉದಯ ಜಾದುಗರ್ ಇವರಿಂದ ನಡೆದ ಜಾದು ಪ್ರದರ್ಶನ ನೆರೆದವರ ಕಣ್ಮನವನ್ನು ಸೆಳೆಯಿತು.

ನಂತರ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅತಿಥಿಗಳು ಬಯಲು ಮಂಟಪದಲ್ಲಿ ಇರಿಸಲಾಗಿದ್ದ ಕಣಿಗೆ ದೀಪ ಹಚ್ಚಿ ಪೂಜೆ ಸಲ್ಲಿಸಿ ಬಿಸು ಹಬ್ಬದ ಸಂಕೇತವಾಗಿ ಬೀಜ ಬಿತ್ತುವ ಕಾರ್ಯಕ್ರಮ (ಕೈಬಿತ್ತ್) ಹಾಗೂ ಗದ್ದೆಯಲ್ಲಿ ಹೊಟ್ಟು ಸುಡುವ ಕಾರ್ಯಕ್ರಮ (ಆರೋಡ್ ಹಬ್ಬ) ಪೂರೈಸಿದರು. ಸಾಂಸ್ಕೃತಿಕ ಸಮಿತಿ ಸದಸ್ಯರು ಹಾಗೂ ಇತರ ಸದಸ್ಯರು ಸೇರಿ ತರಕಾರಿ, ಹಣ್ಣುಗಳು, ಅಕ್ಕಿ ಮುಡಿ ಇನ್ನಿತರ ವಸ್ತುಗಳನ್ನು ಮೆರವಣಿಗೆಯಲ್ಲಿ ತಂದು ಮತ್ತೊಮ್ಮೆ ಕಣಿ ಇಡಲಾಯಿತು. ಕಣಿಗೆ ಅತಿಥಿಗಳು ದೀಪ ಹಚ್ಚಿ ಪೂಜೆ ಮಾಡಿ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆಯನ್ನು ನೀಡಿದರು. ಸಮಿತಿಯ ಯುವಸದಸ್ಯರು ಕಣಿಗೆ ಕೈಮುಗಿದು ನೆರೆದಿದ್ದ ಹಿರಿಯರ ಪಾದ ಮುಟ್ಟಿ ಆಶೀರ್ವಾದ ಪಡೆದರು.





ಅವಿಭಜಿತ ದಕ್ಷಿಣ ಕನ್ನಡದ ಕೆಲವೆಡೆ ಆಚರಣೆಯಲ್ಲಿರುವ "ಕೆಡ್ಡಸ"ದ ಸಂಕೇತವಾಗಿ ಹುರಿದ ಧಾನ್ಯಗಳನ್ನು ಅತಿಥಿಗಳಿಗೆ ಹಾಗು ಕಾರ್ಯಕ್ರಮಕ್ಕೆ ಆಗಮಿಸಿದ್ದ ಎಲ್ಲರಿಗೂ ವಿತರಿಸಲಾಯಿತು.

ಸಭಾ ಕಾರ್ಯಕ್ರಮದ ನಂತರ ವೈವಾಹಿಕ ಜೀವನದಲ್ಲಿ 50 ಸಂವತ್ಸರಗಳನ್ನು ಪೂರೈಸಿದ 9 ಜೋಡಿಗಳಿಗೆ ಅಭಿನಂದನಾ ಕಾರ್ಯಕ್ರಮ ವಿಶೇಷವಾಗಿ ನಿರ್ಮಿಸಲಾದ ಮಂಟಪದಲ್ಲಿ ಅತ್ಯಂತ ಹೃದಯ ಸ್ಪರ್ಶಿಯಾಗಿ ಮೂಡಿಬಂತು.

ಅಂತರ್ ಬಂಟರ ಸಂಘ, ಗುರುಪುರ ಬಂಟರ ಸಂಘ, ಕಾರ್ಕಳ ಬಂಟರ ಸಂಘ, ಉಳ್ಳಾಲ ಬಂಟರ ಸಂಘ, ಜೆಪ್ಪು ಬಂಟರ ಸಂಘಗಳ ಸಾಂಸ್ಕೃತಿಕ ತಂಡಗಳು ಅತ್ಯಂತ ಉತ್ಸಾಹದಿಂದ ಭಾಗವಹಿಸಿದರು. ಭಾಗವಹಿಸಿದ ಪ್ರತಿಯೊಂದು ತಂಡಗಳು ಅತ್ಯಮೋಘ ಪ್ರದರ್ಶನ ನೀಡಿದ್ದು, ಕಾರ್ಯಕ್ರಮ ನೋಡುಗರ ಕಣ್ಣಿಗೆ ಹಬ್ಬವಾಗಿತ್ತು.

ಸ್ಪರ್ಧೆಗಳ ನಡುವೆ ಖ್ಯಾತ ಮಿಮಿಕ್ರಿ ಕಲಾವಿದ ಶ್ರೀ ಗಿರೀಶ್ ಆರಾಧ್ಯ, ಸರಿಗಮಪ ಲಿಟಿಲ್ ಚಾಂಪ್ಸ್ ಖ್ಯಾತಿಯ ಕುಮಾರಿ ಸಾನ್ವಿ ಶೆಟ್ಟಿ ಹಾಗೂ ಶ್ರೀ ಸಂತೋಷ್ ಹೆಗ್ಡೆ ಮತ್ತು ತಂಡದವರು ನೆರೆದವರನ್ನು ರಂಜಿಸಿದರು. ಬಿಸು ಹಬ್ಬದ ಪ್ರಯುಕ್ತ ವಿಶೇಷ ತರಕಾರಿಗಳ ಚಪ್ಪರ, ಹಸಿರು ತೆಂಗಿನ ಗರಿ, ಅಡಕೆ, ಬಾಳೆ, ಸಿಂಗಾರ ಹೂ ಮತ್ತಿತ್ತರ ವಸ್ತುಗಳಿಂದ ಅಲಂಕೃತಗೊಂಡಿದ್ದ ವೇದಿಕೆ, ಸಾಂಕೇತಿಕ ಗದ್ದೆ, ಹಲವಾರು ವಿಶೇಷ ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುವ ಆಳೆತ್ತರದ ಪ್ರತಿಮೆಗಳು ಹಾಗೂ ಇನ್ನಿತರ ಅಲಂಕಾರಗಳೊಂದಿಗೆ ಪರಿಪೂರ್ಣ ಹಬ್ಬದ ವಾತಾವರಣ ನಿರ್ಮಾಣಗೊಂಡಿತ್ತು.

**ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ 2018–19**

ವರ್ಷಂಪ್ರತಿ ನಡೆಯುವ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆಗಳೂ ಈ ಭಾರಿ ಅತ್ಯಂತ ಯಶಸ್ವಿಯಾಗಿ ನೆರವೇರಿತು.

ದಿನಾಂಕ 29.12.2018 ರಂದು ಮಧ್ಯಾಹ್ನ 2ಗಂಟೆಯಿಂದ ಚಿತ್ರಕಲೆ, ರಂಗೋಲಿ ಹಾಗೂ ನಗೆ ಪ್ರಹಸನ ಸ್ಪರ್ಧೆಗಳು ನಡೆದವು.

ದಿನಾಂಕ 30.12.2018 ರಂದು ಛದ್ಮವೇಷ, ಆಶುಭಾಷಣ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಸಿನಿಮಾ ಸಂಗೀತ ಮತ್ತು ಸಮೂಹ ಗಾನದ ಸ್ಪರ್ಧೆಗಳು ನಡೆದು ದಿನಾಂತ್ಯದಲ್ಲಿ ಅಂತ್ಯಾಕ್ಷರಿ ಸ್ಪರ್ಧೆಯು ನೆರವೇರಿತು. ದಿನಾಂಕ 06.01.2019 ರಂದು ಯಕ್ಷಗಾನ ನೃತ್ಯ, ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಸಿನಿಮಾ ನೃತ್ಯ ಸ್ಪರ್ಧೆಗಳು ನಡೆದವು.

ಈ ಎಲ್ಲಾ ಸ್ಪರ್ಧೆಗಳು ವಿವಿಧ ವಿಭಾಗಗಳಲ್ಲಿ ನಡೆದು ಎಲ್ಲಾ ವಯೋಮಾನದವರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೂ ಪ್ರಶಸ್ತಿ ಪತ್ರವನ್ನು ನೀಡಲಾಯಿತು. ಈ ಎಲ್ಲಾ ಸ್ಪರ್ಧೆಗಳ ಬಹುಮಾನ ವಿತರಣೆಯನ್ನು ದಿನಾಂಕ 20.01.2019 ಭಾನುವಾರದಂದು ಯಲಚಗುಪ್ಪೆಯಲ್ಲಿ ನಡೆದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ ಹಾಗೂ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ – II ಇದರ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ವಿತರಿಸಲಾಯಿತು.

ಅಂತರಾಷ್ಟ್ರೀಯ ಖ್ಯಾತಿಯ ನೃತ್ಯ ತಂಡದವರಿಂದ ವಿಶೇಷ ನೃತ್ಯ ಹಾಗೂ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಂದ ವಿಶೇಷ ಕಾರ್ಯಕ್ರಮ ನಡೆಯಿತು.

**ದೀಪಾವಳಿ ಸಂಭ್ರಮ–2019**

ಬೆಳಗ್ಗೆ ಬಲೆ ತೆಲಿಪಾಲೆ ಖ್ಯಾತಿಯ ದೀಪಕ್ ರೈ ಪಾಣಾಜೆ ನೇತೃತ್ವದ ಮಸ್ಕಿರಿ ಕುಡ್ಲ ಇವರು ನಡೆಸಿಕೊಟ್ಟ ತುಳು ನಗೆ

ಕಚಗುಳಿ ನೆರೆದಿದ್ದ ಜನರನ್ನ ನಗೆಗಡಲಲ್ಲಿ ತೇಲಿಸಿತು. ಸದಸ್ಯ ಬಾಂಧವರ ವಿವಿಧ ತಂಡಗಳ ನಡುವೆ ನಡೆದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಸ್ಪರ್ಧಿಗಳು ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ನಂತರ ದಿ. ಡಾ ಡಿ. ಕೆ. ಚೌಟ ವಿರಚಿತ ನಾಟಕ ನಾ. ದಾಮೋದರ ಶೆಟ್ಟಿ ಅನುವಾದಿಸಿದ ಮೂರು ಹೆಜ್ಜೆ ಮೂರು ಲೋಕ ಶ್ರೀ ಸದಾಶಿವ ರೈ ನೀನಾಸಂ ನಿರ್ದೇಶನದಲ್ಲಿ ಸಂಘದ ಸದಸ್ಯರ ಮನೋಜ್ಞ ಅಭಿನಯದಲ್ಲಿ ಉತ್ತಮವಾಗಿ ಮೂಡಿ ಬಂತು.

ಸಭಾ ಕಾರ್ಯಕ್ರಮದ ನಂತರ ಸಂಘದ ಸದಸ್ಯರು ಹಾಗೂ ಮಕ್ಕಳು ನಡೆಸಿಕೊಟ್ಟ ದೀಪಾವಳಿ 'ಪರ್ವ–ಸಾಂಸ್ಕೃತಿಕ ಹಬ್ಬ', ವಿಶೇಷ ಲೇಸರ್ ಪ್ರದರ್ಶನ ಹಾಗೂ ಉತ್ತಮ ಅಭಿನಯದ ಮೂಲಕ ನೆರೆದ ಜನಸ್ತೋಮದ ಮನಸೂರೆಗೊಂಡಿತು.

ದೀಪಾವಳಿ ವಿಶೇಷವಾಗಿ ಸಾಂಪ್ರದಾಯಿಕ ಆಚರಣೆಗಳಿಂದ ಗಮನ ಸೆಳೆಯಿತು. ಗದ್ದೆಗೆ ಹೂ ಹಾಕಿ, ದೀಪ ಬೆಳಗಿಸಿ ಬಲೀಂದ್ರನ ಕರೆದು ಬಲೀಂದ್ರ ಪೂಜೆ, ಹೊಲಿ ರಾಶೀ ಪೂಜೆ, ಲಕ್ಷೀ ಪೂಜೆ, ಅಂಗಡಿ ಪೂಜೆ, ಗೋ ಪೂಜೆ, ತುಳಸಿ ಪೂಜೆ ಮೂಲ ಆಚರಣೆಗಳಿಗೆ ಧಕ್ಕೆಯಾಗದಂತೆ ಆಚರಿಸಿ ನಮ್ಮ ಮಕ್ಕಳಿಗೆ ಈ ಆಚರಣೆಗಳ ಮಹತ್ವ ತಿಳಿಸಲಾಯಿತು. ದೀಪಾವಳಿಯ ಮಹತ್ವವನ್ನು ಸಾರುವ ವಾಮನ ಮೂರ್ತಿ, ಮೈಸೂರು ದಸರಾ ಆನೆ ಮತ್ತು ಅಂಬಾರಿ, ಕರಾವಳಿಯ ಕೃಷಿಯ ಸೊಗಡನ್ನು ನೆನಪಿಸುವ ಗುತ್ತಿನ ಮನೆ, ಮನೆ ಎದುರು ಭತ್ತದ ರಾಶಿ, ಭತ್ತದ ತಿರಿ, ಬೈ ಹುಲ್ಲಿನ ಕುತ್ತರಿ, ತುಳಸಿ




ಕಟ್ಟೆ, ಕಟಾವು ಮಾಡಿದ ಗದ್ದೆ, ದನದ ಕೊಟ್ಟಿಗೆ, ಅಂಗಡಿ ಮುಂತಾದವುಗಳು ಜನರನ್ನು ವಿಶೇಷವಾಗಿ ಆಕರ್ಷಿಸಿತು.

ಬೆಂಕಿಯ ಚೆಂಡಿನ ಜೊತೆ ಯುವತಿಯರು ನಡೆಸಿಕೊಟ್ಟ ತಾಲೀಮು ಇಡೀ ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿತ್ತು.

### ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ 2019–20

ವರ್ಷಂಪ್ರತಿ ನಡೆಯುವ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆಗಳೂ ಈ ಭಾರಿ ಅತ್ಯಂತ ಯಶಸ್ವಿಯಾಗಿ ನೆರವೇರಿತು. ದಿನಾಂಕ 02.11.2019ರಂದು ಮಧ್ಯಾಹ್ನ 2ಗಂಟೆಯಿಂದ ಚಿತ್ರಕಲೆ, ರಂಗೋಲಿ ಸ್ಪರ್ಧೆಗಳು ನಡೆದವು. ದಿನಾಂಕ೦3.11.2೦19ರಂದು ಛದ್ಮವೇಷ, ಆಶುಭಾಷಣ, ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ಸಿನಿಮಾ ಸಂಗೀತ ಮತ್ತು ಸಮೂಹಗಾನದ ಸ್ಪರ್ಧೆಗಳು ನಡೆದು ದಿನಾಂತ್ಯದಲ್ಲಿ ಅಂತ್ಯಾಕ್ಷರಿ ಸ್ಪರ್ಧೆಯು ನೆರವೇರಿತು. ದಿನಾಂಕ 05.01.2020ರಂದು ಶಾಸ್ತ್ರೀಯ ನೃತ್ಯ, ಜಾನಪದ ನೃತ್ಯ, ಸಿನಿಮಾ ನೃತ್ಯ ಸ್ಪರ್ಧೆಗಳು ನಡೆದವು.






ಈ ಎಲ್ಲ ಸ್ಪರ್ಧೆಗಳು ವಿವಿಧ ವಿಭಾಗಗಳಲ್ಲಿ ನಡೆದು ಎಲ್ಲಾ ವಯೋಮಾನದವರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ ಎಲ್ಲಾ ಸ್ಪರ್ಧಿಗಳಿಗೂ ಪ್ರಶಸ್ತಿ ಪತ್ರವನ್ನು ನೀಡಲಾಯಿತು. ಈ ಎಲ್ಲಾ ಸ್ಪರ್ಧೆಗಳ ಬಹುಮಾನ ವಿತರಣೆಯನ್ನು ದಿನಾಂಕ 26.01.2020 ನಡೆದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯಲ್ಲಿ ವಿತರಿಸಲಾಯಿತು.

ಅಂತರಾಷ್ಟ್ರೀಯ ಖ್ಯಾತಿಯ ನೃತ್ಯ ತಂಡದವರಿಂದ ವಿಶೇಷ ನೃತ್ಯ ಹಾಗೂ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಂದ ವಿವಿಧ ಮನೋರಂಜನಾ ಕಾರ್ಯಕ್ರಮಗಳು ಹಾಗೂ ಕಣ್ವ ಮಹರ್ಷಿ ಜಾನಪದ ತಂಡದಿಂದ ಆಕರ್ಷಕ ಜಾನಪದ ನೃತ್ಯ ವೈಭವ ನಡೆಯಿತು.

**"ಬಂಟ ಕಲಾವೀಳ್ಯ – 2020"**





ಗುರುಪುರ ಬಂಟರ ಮಾತೃ ಸಂಘದ ಆಶ್ರಯದಲ್ಲಿ ನಡೆದ " ಬಂಟ ಕಲಾವೀಳ್ಯ – 2020" – ರಾಷ್ಟ್ರ ಮಟ್ಟದ ಅಂತರ್ ಬಂಟರ ಸಂಘ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿದ " ಬಂಟರ ಸಂಘ ಬೆಂಗಳೂರು – ಸಾಂಸ್ಕೃತಿಕ ಸಮಿತಿಯ ನೇತೃತ್ವದ ತಂಡ ಪ್ರಥಮ ಸ್ಥಾನವನ್ನು" ಪಡೆದುಕೊಂಡಿತು. ಅಲ್ಲದೆ ಅತ್ಯುತ್ತಮ ಪ್ರಹಸನ ಪ್ರಶಸ್ತಿ ಕೂಡ ಗೆದ್ದುಕೊಂಡಿತು.

"ಭಗತ್ ಸಿಂಗ್ ಕಂಡಂತೆ ಭಾರತ" ಎನ್ನುವ ವಿಷಯಾಧಾರಿತ ಕಾರ್ಯಕ್ರಮ ಪ್ರಸ್ತುತ ಪಡಿಸಿದ ನಮ್ಮ ತಂಡ, ಅಭಿನಯ, ರಂಗವಿನ್ಯಾಸ, ನೃತ್ಯ, ಹಾಡು ಎಲ್ಲಾ ವಿಭಾಗಗಳಲ್ಲೂ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀ ಸದಾಶಿವ ರೈ ನೀನಾಸಂ ನಿರ್ದೇಶನದಲ್ಲಿ ಕಾರ್ಯಕ್ರಮ ಮೂಡಿಬಂದಿತು. ಸೃಜನ್ ಶೇಖ ನಿರ್ದೇಶನದಲ್ಲಿ ನೃತ್ಯ, ಸಂತೋಷ್ ಹೆಗ್ಡೆ ನೇತೃತ್ವದಲ್ಲಿ ಹಾಡು ಮೂಡಿಬಂದಿತು. ಶೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಸಾರಥ್ಯದಲ್ಲಿ, ಶ್ರೀ ಪ್ರಸಾದ್ ಶೆಟ್ಟಿ ಮತ್ತು ತಂಡ ಸಮಗ್ರ ಪ್ರಶಸ್ತಿಯನ್ನು ಬಾಚಿಕೊಂಡಿತು.

**ಪಿ. ಪ್ರಸಾದ್ ಶೆಟ್ಟಿ**
ಸಂಚಾಲಕರು, ಸಾಂಸ್ಕೃತಿಕ ಸಮಿತಿ

**ವಿಜಯ್. ಜೆ. ಶೆಟ್ಟಿ ಹಾಲಾಡಿ**
ಚೇರ್‌ಪರ್ಸನ್, ಸಾಂಸ್ಕೃತಿಕ ಸಮಿತಿ

# ಬೆಂಗಳೂರು ಬಂಟರ ಸಂಘ

## ವೈದ್ಯಕೀಯ ವಿಭಾಗ – ವರದಿ 2018–20

ಡಾ| ಬಿ. ನಿಶಾಕಾಂತ್ ಶೆಟ್ಟಿಯವರು ಚೇರ್‌ಪರ್ಸನ್‌ರಾಗಿ ಹಾಗೂ ಡಾ| ವಿಭಾ ಎ. ಶೆಟ್ಟಿಯವರು ಸಂಚಾಲಕರಾಗಿರುವ ಸಮಿತಿಯು ವಿವಿಧ ಆರೋಗ್ಯ ಸಮಸ್ಯೆಗಳಿಗೆ ಆರ್ಥಿಕ ನೆರವು ಕೋರಿ ಬಂದ ಅರ್ಜಿಗಳನ್ನು ಪರಿಶೀಲಿಸಿ, ಸೂಕ್ತ ಧನಸಹಾಯ ನೀಡುವಲ್ಲಿ ಶಿಫಾರಸ್ಸು ಮಾಡುತ್ತಿದೆ. 2018–19 ನೇ ಸಾಲಿನಲ್ಲಿ 24 ಜನರಿಗೆ ರೂ. 2,00,000/– ಗಳ ಹಾಗೂ 2019–20 ನೇ ಸಾಲಿನಲ್ಲಿ 30 ಜನರಿಗೆ ರೂ. 2,75,000/– ಗಳನ್ನು ವೈದ್ಯಕೀಯ ವೆಚ್ಚಕ್ಕಾಗಿ ಧನಸಹಾಯ ಮಾಡಲಾಗಿದೆ. ಅವಶ್ಯಕತೆಯಿರುವ ಸದಸ್ಯರಿಗೆ ಉಚಿತ ವೈದ್ಯಕೀಯ ಮಾರ್ಗದರ್ಶನದ ವ್ಯವಸ್ಥೆಯನ್ನು ಮಾಡಲಾಗಿದೆ. ಸಂಘದ ಮುಖವಾಣಿ ಸ್ನೇಹಚಿಂತನೆಯ ಮೂಲಕ ಆರೋಗ್ಯಕ್ಕೆ ಸಂಬಂಧಿಸಿದಂತೆ ವಿವಿಧ ಉಪಯುಕ್ತ ಲೇಖನಗಳನ್ನು ವೈದ್ಯಕೀಯ ವಿಭಾಗದ ಸದಸ್ಯರು ನೀಡುತ್ತಿದ್ದಾರೆ.



ಬಂಟರ ಸಂಘ ಆರ್.ಎನ್.ಎಸ್. ವಿದ್ಯಾರ್ಥಿಗಳಿಗಾಗಿ 2018 ರ ಸೆಪ್ಟೆಂಬರ್, ನವೆಂಬರ್ ತಿಂಗಳುಗಳಲ್ಲಿ ರಾಮಯ್ಯ ಆಸ್ಪತ್ರೆಯ ಸಹಯೋಗದೊಂದಿಗೆ ಹಾಗೂ ವೈದ್ಯಕೀಯ ವಿಭಾಗದ ವೈದ್ಯರ ಸಲಹೆಯಂತೆ ಆಯೋಜಿಸಿದ್ದ ವೈದ್ಯಕೀಯ ತಪಾಸಣಾ ಶಿಬಿರದಲ್ಲಿ ವಿದ್ಯಾರ್ಥಿಗಳಿಗೆ ದಂತ, ನೇತ್ರ, ಚರ್ಮರೋಗ ತಪಾಸಣೆ ಸೇರಿದಂತೆ ಆರೋಗ್ಯ ತಪಾಸಣೆಯನ್ನು ನಡೆಸಲಾಯಿತು. ಆರೋಗ್ಯ ಸಮಸ್ಯೆ ಕಂಡು ಬಂದ ವಿದ್ಯಾರ್ಥಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಿಫಾರಸ್ಸು ಮಾಡಲಾಯಿತು. ಅರ್ಹ ವಿದ್ಯಾರ್ಥಿಗಳಿಗೆ ಉಚಿತ ಚಿಕಿತ್ಸೆ ನೀಡುವ ವ್ಯವಸ್ಥೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಶಾಲೆ ಮತ್ತು ಸಂಘದ ಸಿಬ್ಬಂದಿಗಳಿಗೆ ವೈದ್ಯಕೀಯ ತಪಾಸಣೆ ನಡೆಸುವುದರೊಂದಿಗೆ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳುವ ಬಗ್ಗೆ ಸಲಹೆ–ಸೂಚನೆ ನೀಡಲಾಯಿತು. ಡಾ. ಬಿ. ನಿಶಾಕಾಂತ್ ಶೆಟ್ಟಿಯವರು ಅಗತ್ಯವಿರುವ ವಿದ್ಯಾರ್ಥಿಗಳಿಗೆ ಉಚಿತ ಔಷಧಿಗಳನ್ನು ಹಾಗೂ ಶಾಲೆಗೆ ಪ್ರಥಮ ಚಿಕಿತ್ಸೆ ಕಿಟ್‌ಗೆ ಬೇಕಾದ ಔಷಧಿ ಹಾಗೂ ಇತರ ಸಾಮಗ್ರಿಗಳನ್ನು ಕೊಡುಗೆಯಾಗಿ ನೀಡಿದರು. ಯುವ ವಿಭಾಗದ ಚೇರ್‌ಪರ್ಸನ್ ಡಾ. ಉಮಾನಾಥ್ ಶೆಟ್ಟಿ ಮತ್ತು ಯುವವಿಭಾಗದ ಸದಸ್ಯರು ಸ್ವಯಂ ಸೇವಕರಾಗಿ ಅಗತ್ಯ ಸಹಕಾರ ನೀಡಿದರು.



ದಿನಾಂಕ 18.02.2020 ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ದೈಹಿಕ ಶಿಕ್ಷಣ ವಿಭಾಗದ ಶಿಕ್ಷಕರಿಗಾಗಿ ಅಮೇರಿಕನ್ ಹಾರ್ಟ್ ಅಸೋಸಿಯೇಶನ್ ಪ್ರಮಾಣೀಕೃತ 'Basic Life Support' ಬಗ್ಗೆ ತರಬೇತಿ ಶಿಬಿರವನ್ನು ರಾಮಯ್ಯ ವಿಶ್ವವಿದ್ಯಾನಿಲಯದ Advanced Learning Centre' ನಲ್ಲಿ ಆಯೋಜಿಸಲಾಗಿತ್ತು. ರಾಮಯ್ಯ ಸಂಸ್ಥೆಯ ನುರಿತ ತಜ್ಞರು ಸಿಪಿಆರ್ ಹಾಗೂ ಹೃದಯಾಘಾತದಿಂದ ಬದುಕುಳಿಯಲು ಸಹಾಯವಾಗುವಂತಹ ತಂತ್ರಗಳನ್ನು ಕಲಿಸಿದರು.

**ಡಾ. ವಿಭಾ ಎ. ಶೆಟ್ಟಿ**
ಸಂಚಾಲಕಿ, ವೈದ್ಯಕೀಯ ವಿಭಾಗ

**ಡಾ. ಬಿ. ನಿಶಾಕಾಂತ್ ಶೆಟ್ಟಿ**
ಚೇರ್‌ಪರ್ಸನ್, ವೈದ್ಯಕೀಯ ವಿಭಾಗ

# PROPOSED BUNTS' SANGHA RNS VIDHYANIKETHAN-II

**At Yalachaguppe Village, Tavarekere Hobli , Bangalore South Taluk**

## DEVELOPMENTS AND PROGRESS OF THE PROJECT

Dear members of Bunts' Sangha Bangalore, as all of you are aware, we have laid the foundation stone for our dream project "BUNTS' SANGHA RNS VIDYANIKETHAN II" in Yalachaguppe village on 20th Jan, 2019.As of February 2020, the planned targets have been achieved and as informed earlier, all the structural works have been completed and finishing works are now in progress. Due to the ongoing pandemic Covid-19 and the lock down, the pace of work has been slow and the progress is yet to reach back to full pace.



**Admin block**



**Kindergarten**

As per the earlier contract agreement dated 19.03.2019, M/s Gina Engineering Company Pvt. Ltd. was assigned for the structural, civil, internal plumbing and electrical and other works for Rs. 31,69,98,650/ +GST We are conducting progress review meetings every week at site to check the quality of the work and Progress of the work.

M/s LEAD consultancy and Engineering services (INDIA) has been appointed to get Green building certification from IGBC on 20.08.2019 and we are expecting Gold rated certification for educational institution/campus.



**A public tender was called for on 12.10.2019 for the below additional works:**

1. G.F.R.C. and Facade treatment,
2. Supply of and installation of electromechanical works for STP
3. Hardscape and other developmental works

Tender documents issued 6 nos in each work.
Received Tenders : 4 nos for Hardscape works
3nos for Both GFRC and STP works.

After Technical evaluation we short listed contractors and negotiated several times along with the Tvasta **Project Management Consultants(PMC),** Architects **M/s Urban frame and Vendors.** After inspection of a few completed projects of the vendors to ensure the quality of workmanship; the final decisions taken are as follows:

1. We have released additional work order to M/s Gina Engineering Company Pvt.Ltd. for G.F.R.C and FACADE works on 11/1/2020 for an amount of Rs.1,39,41,556/+ Gst
2. Also, another work order to M/s Gina Engineering Company Pvt.Ltd of an amount of Rs. 1,62,50,027/ +Gst for the Hardscape and other development works.
3. A work order was released for M/S Green Lantern Engineering Pvt. Ltd. on 30.01.2020 for the supply, installation and commissioning of 150 Kld STP and Electro mechanical equipments for an amount of Rs 11,30,000/ + Gst.



**Primary tender negotiation meeting**



**High school block**

Currently, Facade Treatment work, final elevation and other developmental works are in progress and shortly a public tender for landscape works and external electrification works will be called for.

We have conducted meeting on 13.03.2020 to discuss the invitations of donations towards the development of the Institution.



**Additional tender negotiation meeting**



**Boy's hostel block courtyard view**

## DONATION APPEAL

| BLOCKS | DETAILS | DONATION AMOUNT | DONORS NAME |
|---|---|---|---|
| ADMIN BLOCK | ENTIRE BLOCK | 10000000 | Sri k. Prakash Shetty |
| SPORTS ARENA | | 10000000 | |
| KINDERGARTEN | ENTIRE BLOCK | 5000000 | |
| PUC BLOCK | " | 5000000 | |
| HIGH SCHOOL BLOCK | " | 5000000 | |
| BOY'S HOSTEL BLOCK | " | 5000000 | |
| AUDITORIUM | " | 2500000 | Sri Jayprasad Shetty Irmady |
| DINING BLOCK | " | 2500000 | |
| LIBRARY BLOCK | " | 2500000 | |
| LADIES HOSTEL BLOCK | " | 2500000 | |
| HIGH SCHOOL AND PUC BLOCKS | | | |
| | PHYSICS LAB | 750000 | |
| | CHEMISTRY LAB | 750000 | |
| | BIO LAB | 750000 | |
| | COMPUTER LAB | 750000 | |
| | ELECTRONIC LAB | 750000 | |
| | EACH CLASSROOM AND HIGH SCHOOL LABS | 500000 | |
| | EACH STAFF ROOM | 500000 | |
| BOY'S AND LADIES HOSTEL BLOCKS | | | |
| | EACH COMMON ROOM | 500000 | |
| | EACH ROOM | 250000 | |

The entire team is hopeful about completing all the works by the end of 2020 so that the school may be commenced comfortably in the academic year of 2021. Our team invites you to be a part of the realisation of the dream project of Bunts'Sangha Bangalore and requests all the members for their generous donation and support. No amount is small and at a time like this, your support towards the building of an academic institution such as this, will only go a long way.

**Madhukar M. Shetty**
Hon Secretary

**R. Upendra Shetty**
President

**K. Prakash Shetty**
Chairman, Project Committee

**Ramith B. Shetty**
Co-ordinator, Project Committee

**H. Ashok Kumar Shetty**
Convenor, Project Committee

**Office Bearers, EC Members and Members of Project Committee**

# Purchase Committee - 2018-20



The Purchase Committee for the year 2018-20 was formed immediately after the new team of EC took over with Mrs Kalavathi Shetty as the Chairperson.

The Committee consisted of following members ;

Kalavathi Shetty – Chairperson

Ravindranath Marla – Convenor

Santhosh Shetty, Manoj Shetty, Satish Shetty and Mrs. Manjula Shetty - Members

The Purchase Committee looked after every purchase made by the Sangha at the Vijayanagar premises and also of the purchases made at the new site at Yelchanaguppe.

The selection of all vendors was made without any partiality nor favour to any of the vendors. The Purchase Committee not only looked into the tender level but also looked into the technical aspects and saw that whoever was allotted the job completed it perfectly.

**Ravindranath Marla**
Convenor, Purchase Committee

**Kalavathi B. Shetty**
Chairperson, Purchase Committee

# ಸಂಕೀರ್ಣ ನಿರ್ವಹಣಾ ಸಮಿತಿ

ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರು ಚೇರ್‌ಪರ್ಸನ್‌ರಾಗಿರುವ ಸಮಿತಿಯು ಕ್ರಿಯಾಶೀಲವಾಗಿದ್ದು ಸಂಘದ ಸಹಜ ಅಗತ್ಯಗಳಿಗನುಗುಣವಾಗಿ ಕಾರ್ಯ ನಿರ್ವಹಿಸುತ್ತಿದೆ. ನಿರ್ವಹಣೆಯಲ್ಲಿ ಯಾವುದೇ ಲೋಪವಿಲ್ಲದಂತೆ ಸಮಿತಿಯು ಕಾರ್ಯನಿರ್ವಹಿಸುತ್ತಿದೆ. ಆರ್.ಟಿ.ಬಿ. ಸಭಾಭವನದ ಅತಿಥಿ ಕೊಠಡಿ ಹಾಗೂ ಶೌಚಾಲಯಗಳ ನವೀಕರಣ, ಅತಿಥಿ ಕೊಠಡಿಗಳಿಗೆ ಹೊಸ ಹಾಸಿಗೆಗಳ ಖರೀದಿ, ಆಡಳಿತ ಭವನದ ಸಭಾಭವನಕ್ಕೆ ಪರದೆಗಳ ಅಳವಡಿಕೆ. ಆಡಳಿತ ಭವನದ ಭೋಜನ ಕೊಠಡಿಗೆ ಸುಣ್ಣ ಬಣ್ಣ, ಸಭಾಭವನದ ಆಸನಗಳ ದುರಸ್ತಿ, ಅಡುಗೆ ಅನಿಲ ಕೊಳವೆಗಳ ನವೀಕರಣ, ಹೊಸ ಜನರೇಟರ್ ಅಳವಡಿಕೆ. ಹೊಸ ಸೌಂಡ್ ಸಿಸ್ಟಮ್‌ಗಳ ಅಳವಡಿಕೆ. ಡಸ್ಟ್ ಬಿನ್ ವ್ಯವಸ್ಥೆ, ಸ್ಟಾಕ್ ಲಿಸ್ಟನ್ನು ಗುರುತಿಸುವ ಕೆಲಸ, ಕಾಂಪೌಂಡ್ ವಾಲ್, ಆರ್.ಟಿ.ಬಿ.ಗೆ ಹೊಸ ನಾಮಫಲಕ ಅಳವಡಿಕೆಗಳಂತಹ ಮಹತ್ವದ ಯೋಜನೆಗಳನ್ನು ಕೋವಿಡ್–19 ಕಾರಣದಿಂದ ಸಮಿತಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ.

**ಸೌಮ್ಯಪ್ರಿಯ ಹೆಗ್ಡೆ**
ಚೇರ್‌ಪರ್ಸನ್, ಸಂಕೀರ್ಣ ನಿರ್ವಹಣಾ ಸಮಿತಿ

# ಬಂಟರ ಸಂಘ ಬೆಂಗಳೂರು

## ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ – ವರದಿ – 2018–2020

ನಮ್ಮ ಸಮಿತಿಯ ವತಿಯಿಂದ ದಿನಾಂಕ 13.09.2018 ಗುರುವಾರದಿಂದ 15.09.2018 ಶನಿವಾರದವರೆಗೆ ಗಣೇಶ ಚತುರ್ಥಿ ಆಚರಣೆಯನ್ನು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಗಣೇಶ ಮೂರ್ತಿಯ ಪ್ರತಿಷ್ಠಾಪನೆಯೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ ದಂಪತಿಗಳ ಉಪಸ್ಥಿತಿಯಲ್ಲಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ ದಂಪತಿ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ದಂಪತಿಗಳ ಪೂಜಾ ಸಂಕಲ್ಪದೊಂದಿಗೆ ಹಾಗೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮೂರು ದಿನಗಳ ಹಲವಾರು ಕಾರ್ಯಕ್ರಮಗಳು ನಡೆದವು.

ದಿನಾಂಕ 13.09.2018ರಂದು ಬೆಳಿಗ್ಗೆ 8.00 ಗಂಟೆಗೆ ವಿನಾಯಕನಿಗೆ ವಿಶೇಷ ಪಂಚಾಮೃತ ಅಭಿಷೇಕ, ಗಣಪತಿ ಹೋಮ, 10.30ಕ್ಕೆ ಮಂದಿರದ ಮುಂಭಾಗದಲ್ಲಿ ಗಣೇಶ ಮೂರ್ತಿಯ ಪ್ರತಿಷ್ಠಾಪನೆ ಹಾಗೂ ಕಲ್ಪೋಕ್ತ ಪೂಜೆ ಹಾಗೂ ಕರಾವಳಿ ಭಜನಾ ತಂಡದವರಿಂದ ಭಜನಾ ಕಾರ್ಯಕ್ರವು ನಡೆಯಿತು. ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾತಿ ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಸುಮಾರು 2250 ಜನ ಭಕ್ತಾದಿಗಳಿಗೆ ಭೋಜನ ಪ್ರಸಾದವನ್ನು ಏರ್ಪಡಿಸಿದ್ದ ಶ್ರೀ ಸುಬ್ರಹ್ಮಣ್ಯ ಶೆಟ್ಟಿ ತಂತ್ರಾಡಿ ದಂಪತಿಗಳಿಗೆ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು. ಮಧ್ಯಾಹ್ನ 2.00 ಗಂಟೆಗೆ ಸಂಘದ ಯಕ್ಷಗಾನ ಸಮಿತಿಯ ವತಿಯಿಂದ ಏರ್ಪಡಿಸಲಾಗಿದ್ದ ಲವ–ಕುಶ ಯಕ್ಷಗಾನವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು.

ದಿನಾಂಕ 14.09.2018 ಶುಕ್ರವಾರದಂದು ವಿನಾಯಕನಿಗೆ ವಿಶೇಷ ಪೂಜೆ ಹಾಗೂ ಮಹಾಮಂಗಳಾರತಿ ನಡೆಯಿತು. ಸಂಜೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ, ಬೇಬಿ ವೈಷ್ಣವಿಯಿಂದ ಭಕ್ತಿಗೀತೆ ಹಾಗೂ ಜಾನಪದ ಹಾಡುಗಳ ಗಾಯನ ಹಾಗೂ ಶಿರೂರ ಶ್ರೀ ವೆಂಕಟೇಶ್ ಮೂರ್ತಿ ಮತ್ತು ತಂಡದವರಿಂದ ಸಂಗೀತ ಸಂಜೆ. ಈ ಎಲ್ಲಾ ಕಾರ್ಯಕ್ರಮಗಳು ಜನ ಮೆಚ್ಚುಗೆಗೆ ಪಾತ್ರವಾಯಿತು.

ದಿನಾಂಕ 15.09.2018 ಶನಿವಾರದಂದು ಬೆಳಿಗ್ಗೆ ಶ್ರೀ ದೇವರಿಗೆ ವಿಶೇಷ ಪೂಜೆ, ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ ತಂಡದವರಿಂದ ಭಜನಾ ಕಾರ್ಯಕ್ರಮ ಹಾಗೂ ಮಧ್ಯಾಹ್ನ ಮಹಾಮಂಗಳಾರತಿ ನಡೆಯಿತು. ಸಂಜೆ 6.00ಕ್ಕೆ ಶ್ರೀ ದೇವರ ಮೂರ್ತಿಯನ್ನು ವಿಜೃಂಭಣೆಯಿಂದ ಬಂಟರ ಸಂಘದ ಆವರಣದಿಂದ ವಿಜಯನಗರದ ಸುತ್ತಮುತ್ತ ಮೆರವಣಿಗೆಯ ಮೂಲಕ ಮಲತ್ತಹಳ್ಳಿ ಕೆರೆಯಲ್ಲಿ ವಿಸರ್ಜಿಸಲಾಯಿತು. ಬರ್ಕೆ ಫ್ರೆಂಡ್ಸ್ ತಂಡದವರ ಹುಲಿ ಕುಣಿತ ಕಾರ್ಯಕ್ರಮವು ಮೆರವಣಿಗೆಯ ವಿಶೇಷ ಆಕರ್ಷಣೆಯಾಗಿತ್ತು.


ಈ ಎಲ್ಲಾ ಪೂಜಾ ಕಾರ್ಯಕ್ರಮಗಳಲ್ಲಿ ಸಂಘದ ಮಾಜಿ ಅಧ್ಯಕ್ಷರುಗಳು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಹಾಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಭಕ್ತಾದಿಗಳು ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ದೇವರ ಕೃಪೆಗೆ ಪಾತ್ರರಾದರು.



ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಪ್ರಾಂಗಣದಲ್ಲಿ 19ನೇ ವಾರ್ಷಿಕೋತ್ಸವವನ್ನು ದಿನಾಂಕ 19.01.2019ನೇ ಶುಕ್ರವಾರದಂದು ವಿಜೃಂಭಣೆಯಿಂದ ಆಚರಿಸಲಾಯಿತು.

ಪೂರ್ವಾಹ್ನ 8.00 ಗಂಟೆಗೆ ಫಲ ಪಂಚಾಮೃತ ಅಭಿಷೇಕ, ಗಣಹೋಮ ಇತ್ಯಾದಿ ಪೂಜಾ ಕಾರ್ಯಕ್ರಮಗಳೊಂದಿಗೆ ಶ್ರೀ ಆರ್. ಉಪೇಂದ್ರ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಹಾಗೂ ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ ದಂಪತಿಗಳ ಪೂಜಾ ಸಂಕಲ್ಪದೊಂದಿಗೆ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ದಂಪತಿಗಳ ಹಾಗೂ ಸಾವಿರಾರು ಭಕ್ತರ ಉಪಸ್ಥಿತಿಯಲ್ಲಿ ಗಣಹೋಮವನ್ನು ನಡೆಸಲಾಯಿತು.

ಮಧ್ಯಾಹ್ನ 12.00ಗಂಟೆಗೆ ಮಹಾಮಂಗಳಾರತಿ ನಡೆಯಿತು. ಶ್ರೀಮತಿ ಮಾಲಾ ಭಾಸ್ಕರ ಶೆಟ್ಟಿ ಮತ್ತು ಮತ್ತು ತಂಡದವರಿಂದ ಭಜನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಸುಮಾರು 2000 ಮಂದಿ ಭಕ್ತಾಧಿಗಳಿಗೆ ಅನ್ನಸಂತರ್ಪಣೆಯನ್ನು ನೀಡಲಾಯಿತು.



ಸಂಜೆ 5.30ಕ್ಕೆ ಸರಿಯಾಗಿ ಭಜನಾ ಕಾರ್ಯಕ್ರಮವು ಶ್ರೀ ರವಿಶಂಕರ ಗುರೂಜಿಯವರ ಶಿಷ್ಯರಿಂದ (ಚಂದ್ರಕಾಂತ್ ಶೆಟ್ಟಿ) ಅದ್ದೂರಿಯಾಗಿ ನೆರವೇರಿತು.

ದಿನಾಂಕ 02.09.2019 ಸೋಮವಾರದಿಂದ 04.09.2019 ಬುಧವಾರದವರೆಗೆ ಗಣೇಶ ಚತುರ್ಥಿ ಆಚರಣೆಯನ್ನು ಸಂಘದ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದಲ್ಲಿ ಶ್ರೀ ಗಣೇಶ ಮೂರ್ತಿಯ ಪ್ರತಿಷ್ಠಾಪನೆಯೊಂದಿಗೆ ವಿಜೃಂಭಣೆಯಿಂದ ಆಚರಿಸಲಾಯಿತು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ ದಂಪತಿ, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ ದಂಪತಿ ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ದಂಪತಿಗಳ ಪೂಜಾ ಸಂಕಲ್ಪದೊಂದಿಗೆ ಹಾಗೂ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮೂರು ದಿನಗಳು ಹಲವಾರು ಕಾರ್ಯಕ್ರಮಗಳು ನಡೆದವು.


ದಿನಾಂಕ 02.09.2019ರಂದು ಬೆಳಿಗ್ಗೆ 8.00 ಗಂಟೆಗೆ ವಿನಾಯಕನಿಗೆ ವಿಶೇಷ ಪಂಚಾಮೃತ ಅಭಿಷೇಕ, ಗಣಪತಿ ಹೋಮ, 10.30ಕ್ಕೆ ಮಂದಿರದ ಮುಂಭಾಗದಲ್ಲಿ ಗಣೇಶ ಮೂರ್ತಿಯ ಪ್ರತಿಷ್ಠಾಪನೆ ಹಾಗೂ ಕಲ್ಪೋಕ್ತ ಪೂಜೆ ಹಾಗೂ ಶ್ರೀಮತಿ ಮಾಲಾ ಭಾಸ್ಕರ್ ಶೆಟ್ಟಿ ತಂಡದವರಿಂದ ಭಜನಾ ಕಾರ್ಯಕ್ರಮವು ನಡೆಯಿತು. ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾರತಿ ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು. ಮಧ್ಯಾಹ್ನ ಭಕ್ತಾದಿಗಳಿಗೆ ಭೋಜನ ಪ್ರಸಾದವನ್ನು ಏರ್ಪಡಿಸಿದ್ದ ಶ್ರೀ ಸುಬ್ರಹ್ಮಣ್ಯ ಶೆಟ್ಟಿ ತಂತ್ರಾಡಿ ದಂಪತಿಗಳಿಗೆ ಸಂಘದ ಪರವಾಗಿ ಹೃತ್ಪೂರ್ವಕ

ಅಭಿನಂದನೆಗಳು. ಮಧ್ಯಾಹ್ನ 1.30 ಕ್ಕೆ ಸಭಾ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರು, ವಿಜಯನಗರ ಶಾಸಕರಾದ ಶ್ರೀ ಎಂ. ಕೃಷ್ಣಪ್ಪನವರು ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಂಘದ ಎಲ್ಲಾ ಕೆಲಸ ಕಾರ್ಯಗಳಿಗೂ ಮೆಚ್ಚುಗೆ ವ್ಯಕ್ತಪಡಿಸಿ ನಾನು ನಿಮ್ಮೊಂದಿಗೆ ಇದ್ದೇನೆ ಎಂಬ ಭರವಸೆಯನ್ನು ನೀಡಿದರು. ನಂತರ ಸಂಘದ ಯಕ್ಷಗಾನ ಸಮಿತಿಯ ವತಿಯಿಂದ ಏರ್ಪಡಿಸಲಾಗಿದ್ದ ಶಮಂತಕೋಪಖ್ಯಾನ ಯಕ್ಷಗಾನವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಯಕ್ಷಗಾನ ಕಾರ್ಯಕ್ರಮಕ್ಕೆ ಸಂಪೂರ್ಣ ಸಹಕಾರವನ್ನು ನೀಡಿದ ಸಂಘದ ಯಕ್ಷಗಾನ ಸಮಿತಿಯ ಚೇರ್‌ಪರ್ಸನ್ ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ ಹಾಗೂ ಯಕ್ಷಗಾನ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

ದಿನಾಂಕ 03.09.2019 ಮಂಗಳವಾರ ವಿನಾಯಕನಿಗೆ ವಿಶೇಷ ಪೂಜೆ ಹಾಗೂ ಮಹಾಮಂಗಳಾರತಿ ನಡೆಯಿತು. ಸಂಜೆ ಖ್ಯಾತ ಹಿನ್ನೆಲೆ ಗಾಯಕಿ ಶ್ರೀಮತಿ ಬಿ. ಕೆ. ಸುಮಿತ್ರ, ಹೆಸರಾಂತ ಗಾಯಕ ಶಿರೂರ ಶ್ರೀ ವೆಂಕಟೇಶ್ ಮೂರ್ತಿ, ಖ್ಯಾತ ಸಂಗೀತ ನಿರ್ದೇಶಕರು ಶ್ರೀ ಕೆ. ಗುರುರಾಜ್ ಮತ್ತು ತಂಡದವರಿಂದ ಸುಗಮ ಸಂಗೀತ ಕಾರ್ಯಕ್ರಮ ಜನ ಮೆಚ್ಚುಗೆಗೆ ಪಾತ್ರವಾಯಿತು.

ದಿನಾಂಕ 04.09.2019 ಬುಧವಾರದಂದು ಬೆಳಿಗ್ಗೆ ಶ್ರೀ ದೇವರಿಗೆ ವಿಶೇಷ ಪೂಜೆ, ಮಧ್ಯಾಹ್ನ ಮಹಾಮಂಗಳಾರತಿ ನಡೆಯಿತು. ಸಂಜೆ 4.30ರಿಂದ ಕರಾವಳಿ ಭಜನಾ ತಂಡದವರಿಂದ ಭಜನಾ ಕಾರ್ಯಕ್ರಮವು ನೆರವೇರಿತು. ಸಂಜೆ 6.00ಕ್ಕೆ ಶ್ರೀ ದೇವರ ಮೂರ್ತಿಯನ್ನು ವಿಜೃಂಭಣೆಯಿಂದ ಬಂಟರ ಸಂಘದ ಆವರಣದಿಂದ ಹೊರಟು ವಿಜಯನಗರದ ಮತ್ತು ಚಂದ್ರಾ ಲೇಔಟ್ ಸುತ್ತಮುತ್ತ ಮೆರಮಣಿಗೆಯ ಮೂಲಕ ಮಲತ್ತಹಳ್ಳಿ ಕೆರೆಯಲ್ಲಿ ವಿಸರ್ಜಿಸಲಾಯಿತು. ಪೊಳಲಿ ಮತ್ತು ಬರ್ಕೆ ಫ್ರೆಂಡ್ಸ್ ತಂಡದವರ ಹುಲಿ ಕುಣಿತ ಮತ್ತು ಕೀಲುಗೊಂಬೆ ಕುಣಿತ ಕಾರ್ಯಕ್ರಮವು ಮೆರಮಣಿಗೆಯ ವಿಶೇಷ ಆಕರ್ಷಣೆಯಾಗಿತ್ತು.





ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಪ್ರಾಂಗಣದಲ್ಲಿ 20ನೇ ವಾರ್ಷಿಕೋತ್ಸವವನ್ನು ದಿನಾಂಕ 19.01.2019ನೇ ಭಾನುವಾರದಂದು ವಿಜೃಂಭಣೆಯಿಂದ ಆಚರಿಸಲಾಯಿತು.

ನಮ್ಮ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ನಾವು ಆಯೋಜಿಸಿರುವ ಕೆಲವು ಪ್ರಮುಖ ಕಾರ್ಯಗಳನ್ನು ಈಗಾಗಲೇ ನಿರ್ವಿಘ್ನವಾಗಿ ಪೂರ್ಣಗೊಳಿಸಲಾಗಿದೆ. ಒಂದು ಆಲೋಚನೆ ಹಲವಾರು ಉತ್ತಮ ಕಾರ್ಯಗಳಿಗೆ ಪ್ರೇರಣೆಯಾಗುತ್ತದೆ ಎಂಬುದು ಇದರಿಂದ ವಿಧಿತವಾಗುತ್ತದೆ. ಪೂರ್ವಾಹ್ನ 8.00 ಗಂಟೆಗೆ ಫಲ ಪಂಚಾಮೃತ ಅಭಿಷೇಕ, ಗಣಹೋಮ ಇತ್ಯಾದಿ ಪೂಜಾ ಕಾರ್ಯಕ್ರಮಗಳೊಂದಿಗೆ ಶ್ರೀ ಆರ್. ಉಪೇಂದ್ರ ಶೆಟ್ಟಿ

ದಂಪತಿಗಳು, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ ದಂಪತಿಗಳು ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ದಂಪತಿಗಳ ಪೂಜಾ ಸಂಕಲ್ಪದೊಂದಿಗೆ ಹಾಗೂ ಸಾವಿರಾರು ಭಕ್ತರ ಉಪಸ್ಥಿತಿಯಲ್ಲಿ ಗಣಹೋಮವನ್ನು ನಡೆಸಲಾಯಿತು.

ಬೆಳಿಗ್ಗೆ 10.00 ಗಂಟೆಗೆ ಸಂಘದ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಂದ 'ಸೀತಾ ವಿಯೋಗ' ಕುಶ–ಲವ ಮಕ್ಕಳ ಯಕ್ಷಗಾನ ಕಾರ್ಯಕ್ರಮ ಸಂಘದ ಆವರಣದಲ್ಲಿ ಅತ್ಯಂತ ಅದ್ದೂರಿಯಾಗಿ ನೆರವೇರಿ ಜನಮೆಚ್ಚುಗೆಗೆ ಪಾತ್ರವಾಯಿತು. ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾರತಿ ನಡೆಯಿತು. ಸುಮಾರು 2000 ಮಂದಿ ಭಕ್ತಾದಿಗಳಿಗೆ ಅನ್ನಸಂತರ್ಪಣೆಯನ್ನು ಪ್ರಾರ್ಥನಾ ಸಮಿತಿಯ ಚೇರ್‌ಪರ್ಸನ್‌ರಾದ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರುರವರು ನೀಡಿದರು. ಮಧ್ಯಾಹ್ನ 2.00 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಿತು. ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಹರೀಶ್ ಕುಮಾರ್ ಶೆಟ್ಟಿಯವರು ಪ್ರಾರ್ಥನಾ ಮಂದಿರದ ಬಗ್ಗೆ ಮೆಚ್ಚುಗೆಯ ಮಾತನಾಡಿ ಸಂಘದ ಈಗಿನ ಅಧ್ಯಕ್ಷರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಮಧ್ಯಾಹ್ನ 2.30 ಗಂಟೆಗೆ ಸಂಘದ ಮಹಿಳಾ ಕಲಾವಿದರಿಂದ ಯಕ್ಷ ನೃತ್ಯ ರೂಪಕವು ಮನಮೋಹಕವಾಗಿ ಮೂಡಿಬಂತು. ನಂತರ ಸಂಘದ ಸದಸ್ಯರು ಹಾಗೂ ಖ್ಯಾತ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ 'ಬಬ್ರುವಾಹನ ಕಾಳಗ' ಯಕ್ಷಗಾನವು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

**ಉಮೇಶ್ ಕುಮಾರ್ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ

**ರಾಜೇಶ್ ಶೆಟ್ಟಿ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

# ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿ –2018–20

ಸಂಘದ ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರು ಚೇರ್‌ಪರ್ಸನ್‌ರಾಗಿ ಹಾಗೂ ಶ್ರೀ ವಿಜೇತ್ ಶೆಟ್ಟಿಯವರು ಸಂಚಾಲಕರಾಗಿರುವ ಸಮಿತಿಯು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿದೆ. ಹೊಸ ಸದಸ್ಯರ ಸೇರ್ಪಡೆ ಮತ್ತು ಸದಸ್ಯರ ಪರಸ್ಪರರ ಮಾಹಿತಿಗಾಗಿ ನೂತನ ಕೈಪಿಡಿ ಹೊರತರುವ ನಿಟ್ಟಿನಲ್ಲಿ ದಾನಿಗಳ ನೆರವಿನಿಂದ ಅಂತಿಮ ಹಂತವನ್ನು ತಲುಪಿದ್ದೇವೆ ಹಾಗೂ ದಾನಿಗಳಿಗೆ ಸಮಿತಿಯು ಆಭಾರಿಯಾಗಿದೆ.


ಈ ಎರಡು ವರ್ಷದ ಅವಧಿಯಲ್ಲಿ 732 ಹೊಸ ಸದಸ್ಯರು ಸೇರ್ಪಡೆಗೊಂಡಿರುತ್ತಾರೆ. ದಿನಾಂಕ 31.03.2020ರ ತನಕ ಅಂಕಿ ಅಂಶದಂತೆ ಸಂಘದಲ್ಲಿ ಒಟ್ಟು 15074 ಸದಸ್ಯರಿದ್ದಾರೆ.

ವೆಬ್‌ಸೈಟ್‌ನಲ್ಲಿ ಸಂಘದ ಪ್ರಮುಖ ಕಾರ್ಯಕ್ರಮಗಳು, ಸದಸ್ಯರ ವಿವರ ಹಾಗೂ ಸಂಘದ ಇತರ ಸೇವೆಗಳ ವಿವರಗಳನ್ನು ಅಳವಡಿಸಲಾಗಿದೆ. ಸಂಘದ ಸದಸ್ಯರಿಗೆ ಸಂಘದ ಕಾರ್ಯಕ್ರಮ ಹಾಗೂ ಇತರ ಮಾಹಿತಿಗಳು ತಕ್ಷಣ ದೊರಕುವಂತೆ ಸಂಘದ ಕಛೇರಿಯ ಮೂಲಕವೇ ಎಸ್.ಎಂ.ಎಸ್. ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ. ಉದ್ಯೋಗಾಕಾಂಕ್ಷಿಗಳಿಗೆ ನೇರವಾಗಿ ತಮ್ಮ ಅರ್ಜಿಗಳನ್ನು ವೆಬ್‌ಸೈಟ್ ಮೂಲಕ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ವಿದ್ಯಾರ್ಥಿ ವೇತನದ ಬಗ್ಗೆ ಮಾಹಿತಿಗಳನ್ನು ಹಾಗೂ ಅರ್ಜಿ ನಮೂನೆಗಳನ್ನು ವೆಬ್‌ಸೈಟ್ ಮೂಲಕವೇ ಪಡೆಯಲು ವ್ಯವಸ್ಥೆ ಕಲ್ಪಿಸಲಾಗಿದೆ. ಸಂಘದ ಎಲ್ಲಾ ಕಾರ್ಯಕ್ರಮಗಳ ಸಂಪೂರ್ಣ ಮಾಹಿತಿಗಳು ವೆಬ್‌ಸೈಟ್‌ನಲ್ಲಿ ಲಭ್ಯವಿದೆ.

**ವಿಜೇತ್ ಶೆಟ್ಟಿ**
ಸಂಚಾಲಕರು, ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿ

**ಸೌಮ್ಯಪ್ರಿಯ ಹೆಗ್ಡೆ**
ಚೇರ್‌ಪರ್ಸನ್, ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿ

# ಶ್ರದ್ಧಾಂಜಲಿ



**ಶ್ರೀ ರವಿಶಂಕರ ಆಳ್ವ**
ಸದಸ್ಯತ್ವ ಸಂಖ್ಯೆ: CL005708

ಬಡಿಲಗುತ್ತು ಶ್ರೀ ರವಿಶಂಕರ ಆಳ್ವರವರು ದಿನಾಂಕ 29.03.2020 ರಂದು ತಮ್ಮ 63ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಪಾತ್ರಬೈಲು ಶ್ರೀಮತಿ ಹರ್ಷಲತಾ ಆರ್. ಆಳ್ವ, ಓರ್ವ ಪುತ್ರ, ಓರ್ವ ಪುತ್ರಿ, ಓರ್ವ ಮೊಮ್ಮಗು, ಸಹೋದರ, ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಗುರುಪುರ ದೋಣಿಂಜೆಗುತ್ತು ಶ್ರೀ ವಸಂತ ಶೆಟ್ಟಿಯವರು ದಿನಾಂಕ 03.05.2020ರಂದು ತಮ್ಮ 68ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಎರ್ಮಾಳ್ ಅಂಬುಡಿಕಾಲ ಶ್ರೀಮತಿ ಗೀತಾ ವಿ. ಶೆಟ್ಟಿ, ಓರ್ವ ಪುತ್ರ, ಓರ್ವ ಪುತ್ರಿ, ಓರ್ವ ಸಹೋದರ, ಮೂವರು ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಎಸ್. ವಸಂತ ಶೆಟ್ಟಿ**
ಸದಸ್ಯತ್ವ ಸಂಖ್ಯೆ: LM0014126



**ಶಿರ್ವಕೋಡು ಡಾ. ಪ್ರೇಮನಾಥ ಶೆಟ್ಟಿ**
ಸದಸ್ಯತ್ವ ಸಂಖ್ಯೆ: CL006298

ಪೆರೋಡಿ ದಿ. ಡಾ. ರತ್ನಾಕರ ಶೆಟ್ಟಿ ಮತ್ತು ಶಿರ್ವಕೋಡು ದಿ. ಲೀಲಾವತಿ ಆರ್. ಶೆಟ್ಟಿಯವರ ಪುತ್ರ ಶಿರ್ವಕೋಡು ಡಾ. ಪ್ರೇಮನಾಥ ಶೆಟ್ಟಿಯವರು ದಿನಾಂಕ 28.05.2020ರಂದು ತಮ್ಮ 60ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀಮತಿ ವಿನಿತಾ ಪಿ. ಶೆಟ್ಟಿ, ಓರ್ವ ಪುತ್ರಿ, ಇಬ್ಬರು ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.




**ಶ್ರೀ ಸುಂದರ ಶೆಟ್ಟಿ ಟಿ.**
ಸದಸ್ಯತ್ವ ಸಂಖ್ಯೆ: CL003561

ಬಿರ್ಲಾ ಕಂಪೆನಿಯಲ್ಲಿ ವೃತ್ತಿ ಜೀವನವನ್ನು ನಡೆಸಿ ನಿವೃತ್ತರಾದ ಮೂಡುಬೆಳ್ಳೆ ಶ್ರೀ ಸುಂದರ ಶೆಟ್ಟಿಯವರು ದಿನಾಂಕ 30.05.2020ರಂದು ತಮ್ಮ 74ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಅಲೆವೂರು ಶ್ರೀಮತಿ ಸುಲೋಚನಾ ಎಸ್. ಶೆಟ್ಟಿ, ಇಬ್ಬರು ಪುತ್ರಿಯರು ಓರ್ವ ಪುತ್ರ, ಮೊಮ್ಮಕ್ಕಳು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಪುತ್ತಿಗೆ ಶ್ರೀ ರಾಧಾಕೃಷ್ಣ ಭಂಡಾರಿಯವರು ದಿನಾಂಕ 14.05.2020ರಂದು ತಮ್ಮ 74ನೇ ವಯಸ್ಸಿನಲ್ಲಿ ನಿಧನರಾದರು. ಎಸ್.ಬಿ.ಐ. ನ ನಿವೃತ್ತ ಮುಖ್ಯ ವ್ಯವಸ್ಥಾಪಕರಾದ ಇವರು ತಮ್ಮ ಪತ್ನಿ ಕಾಸರಗೋಡು ಬಾಯರ್‌ಗುತ್ತು ಶ್ರೀಮತಿ ಎನ್. ಸುಜಾತ ಭಂಡಾರಿ, ಇಬ್ಬರು ಪುತ್ರಿಯರು, ಮೂವರು ಮೊಮ್ಮಕ್ಕಳು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಪುತ್ತಿಗೆ ಶ್ರೀ ರಾಧಾಕೃಷ್ಣ ಭಂಡಾರಿ**
ಸದಸ್ಯತ್ವ ಸಂಖ್ಯೆ: LM012322



**ಶ್ರೀ ಎನ್. ಮುತ್ತಪ್ಪ ರೈ**
ಸದಸ್ಯತ್ವ ಸಂಖ್ಯೆ: LM009241

ಕರ್ನಾಟಕ ರಾಜ್ಯ ಅಥ್ಲೆಟಿಕ್ ಅಸೋಸಿಯೇಶನ್ ಅಧ್ಯಕ್ಷರು ಹಾಗೂ ಜಯಕರ್ನಾಟಕ ಸಂಸ್ಥಾಪಕ ಅಧ್ಯಕ್ಷರಾದ ಪುತ್ತೂರು ಶ್ರೀ ಎನ್. ಮುತ್ತಪ್ಪ ರೈಯವರು ದಿನಾಂಕ 15.05.2020ರಂದು ತಮ್ಮ 68ನೇ ವಯಸ್ಸಿನಲ್ಲಿ ನಿಧನರಾದರು. ಇವರು ಇಬ್ಬರು ಪುತ್ರರು, ಸಹೋದರರು, ಸಹೋದರಿಯರು ಹಾಗೂ ಬಂಧು–ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.

ಸ್ಥಾಪನೆ : 1997 ದೂರವಾಣಿ: 23393444

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

# Vijaya Pathina Souharda Sahakari Niyamitha

ನಂ. 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರಲೇಔಟ್ ಮುಖ್ಯರಸ್ತೆ, ಇನ್‌ಕಮ್ ಟ್ಯಾಕ್ಸ್ ಲೇಔಟ್
ವಿಜಯನಗರ, ಬೆಂಗಳೂರು–560 040.
E-mail: vijaya_souharda@yahoo.in, vijayasouharda@rediffmail.com

**ಶ್ರೀ ಐ. ಜಯಪ್ರಸಾದ್ ಶೆಟ್ಟಿ**
ಅಧ್ಯಕ್ಷರು

**ಶ್ರೀ ಕೆ. ಭಗವಾನ್ ದಾಸ್ ರೈ**
ಉಪಾಧ್ಯಕ್ಷರು

ನಿರ್ದೇಶಕರು :

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಚಂದ್ರಹಾಸ್ ರೈ. ಡಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀ ಶಿವಾನಂದ ಶೆಟ್ಟಿ ಟಿ.ಎನ್
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಶ್ರೀ ಕೆ.ಆರ್. ಶೇಷಾದ್ರಿ – ಕಾರ್ಯದರ್ಶಿ

## ಸಾಲಗಳು

- ಜಾಮೀನು ಸಾಲ : ರೂ. 50,000/–
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 15 ಲಕ್ಷ
- ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 20 ಲಕ್ಷ – 120 ತಿಂಗಳು

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 15%, 1 ಲಕ್ಷ ಮೇಲ್ಪಟ್ಟು – 14%**

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

**ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದೆ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿದರವನ್ನು ನೀಡಲಾಗುವುದು. ಶೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪ್ರತಿದಿನ ಅಥವಾ ವಾರದ ಪಿಗ್ಮಿಯನ್ನು ಸಂಗ್ರಹಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.**

**2016–17 ರಿಂದ ಕ್ರಮವಾಗಿ 15% ಡಿವಿಡೆಂಡ್ ವಿತರಣೆ**

ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆ ಮಾಡೋಣ

| | ಬೆಳಿಗ್ಗೆ | ಸಾಯಂಕಾಲ | ವಾರದ ರಜಾದಿನ |
|---|---|---|---|
| ಮಂಗಳವಾರದಿಂದ ಶನಿವಾರದವರೆಗೆ | 9.30 ರಿಂದ 1.00 | 2.00 ರಿಂದ 6.00 | ಸೋಮವಾರ |
| ಭಾನುವಾರ | 9.30 ರಿಂದ 1.00 | ರಜಾ | |

ಅಪೆಕ್ಸ್ ಬ್ಯಾಂಕ್‌ನ ಎಲ್ಲಾ ರಜೆಗಳೂ (ವಾರದ ರಜಾ ಹೊರತು ಪಡಿಸಿ) ಅನ್ವಯಿಸುತ್ತವೆ.
ಸ್ಥಾಪಕ ಅಧ್ಯಕ್ಷರು : **ದಿ|| ಡಾ|| ಐ.ವಿ. ಶೆಟ್ಟಿ – 1997**

ADVT




ಕೋವಿಡ್–19 ನಿರ್ಬಂಧಗಳಿಂದಾಗಿ ತಮ್ಮ ಊರುಗಳಲ್ಲಿ ಸಿಲುಕಿಹಾಕಿಕೊಂಡವರನ್ನು ಬೆಂಗಳೂರು ಬಂಟರ ಸಂಘದ ವತಿಯಿಂದ ಉಚಿತವಾಗಿ ಬಸ್‌ಗಳ ಮುಖಾಂತರ ಬೆಂಗಳೂರಿಗೆ ಕರೆತರಲಾಯಿತು.




ಕೋವಿಡ್–19 ಸಂತ್ರಸ್ಥರಿಗೆ ಉಚಿತ ದಿನಸಿ ಕಿಟ್‌ಗಳನ್ನು ನಮ್ಮ ಸಂಘದ ವತಿಯಿಂದ ನೀಡಲಾಯಿತು.





**Work progress in RNS Vidyaniketan –II at Yalachaguppe**

REGISTERED KA/BGW-1589/2018-2020 RNI NO: KARBIL/2005/16402, Date of publication 07.06.2020
Licenced post without prepayment License No. WPP-219, Total No. of page 44+4=48
Licenced to post at Bangalore PSO, Mysore Road, Bengaluru-560026, on 10th or 12th of every Month




ADVT

Printed and Published by : Sri Madhukar M. Shetty on Behalf of Bunts' Sangha Bangalore
#324, Bunts' Sangha Complex, Chord Road, Vijayanagar, Bengaluru - 560 040. Editor : M. Muralidhara Hegde
Printed at Sairam Printers, Vijayanagar, Bengaluru - 560 040. Mob : 9845630847